ಕೇವಲ 15 ನಿಮಿಷಗಳಲ್ಲಿ ಪಾಸ್‌ಪೋರ್ಟ್ ಸೈಜ್ ಡಿಜಿಟಲ್ ಫೋಟೋ
ಶ್ರೀ ವೆಂಕಟೇಶ್ವರ
ಡಿಜಿಟಲ್ ಕಲರ್ ಲ್ಯಾಬ್ ಮತ್ತು ಸ್ಟುಡಿಯೋ
ಗಾಂಧಿ ಸರ್ಕಲ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ
☎: 272224

ಜನತಾವಾಣಿ

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಸಾರವುಳ್ಳ ಮಧ್ಯ ಕರ್ನಾಟಕದ ಏಕೈಕ ಪತ್ರಿಕೆ
ಸಂಸ್ಥಾಪಕ ಸಂಪಾದಕರು : ಹೆಚ್.ಎನ್.ಷಡಾಕ್ಷರಪ್ಪ      ಸಂಪಾದಕರು : ಎಂ.ಎಸ್.ವಿಕಾಸ್
ವೆಬ್ ಸೈಟ್ : www.janatavani.com      ಈ ಮೇಲ್ : janathavani@mac.com

ಜಗತ್ತಿನಲ್ಲಿಯೇ.. ಅತ್ಯಂತ ಶುದ್ಧೀಕರಿಸಿದ ನೀರಿಗಾಗಿ...
KENT
Mineral RO
Water Purifiers
RO + UF + UV + TDS CONTROLER
HAMSA ENTERPRISES
#431, Chetana Hotel Road, P.J.Extn.,DAVANGERE.
Ph: 236220 / 232355 Cell: 94483 18835

ಸಂಪುಟ : 38 | ಸಂಚಿಕೆ : 273 | ನೋಂದಣಿ ಸಂಖ್ಯೆ : 27369/75 | ಕೆಎಎಸ್ ಕೆಸಿಟಿಎಲ್ : 275/2009-11 | ಮಂಗಳವಾರ ಫೆಬ್ರವರಿ 14, 2012 | ದಾವಣಗೆರೆ ದೂರವಾಣಿ : 254736, 231016 | ಫ್ಯಾಕ್ಸ್ : 254609 | ಪುಟ : 4 | ರೂ : 2-00

# ದಾವಣಗೆರೆ ಹಬ್ಬದಲ್ಲಿ 'ಪಕ್ಷ'ಪಾತ ಇರಬಾರದು

## ಅದ್ದೂರಿ ದಾವಣಗೆರೆ ಹಬ್ಬಕ್ಕೆ ಸರ್ಕಾರಿ ನೌಕರರ ಹಣ ವಸೂಲಿ ಸರಿ ಅಲ್ಲ : ಶಾಸಕ ಎಸ್ಸೆಸ್

**ದಾವಣಗೆರೆ, ಫೆ. 13 - ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಜನರು ಅನ್ನ, ಮೇವಿಗೆ ಪರದಾಡುತ್ತಿರುವಾಗ 60 ಲಕ್ಷ ರೂ. ಖರ್ಚು ಮಾಡಿ ದಾವಣಗೆರೆ ಹಬ್ಬ ಆಚರಿಸುವ ಅಗತ್ಯ ಇರಲಿಲ್ಲ. ಇದಕ್ಕಾಗಿ ಪೊಲೀಸ್ ಸಹಿತ ಎಲ್ಲಾ ಸರ್ಕಾರಿ ನೌಕರರಿಂದ ಸಂಬಳ ವಸೂಲಿ ಮಾಡಿರುವುದು ಯಾವ ಧರ್ಮ? ಇದು ಸರಿ ಅಲ್ಲ. ಒಬ್ಬ ಮಂತ್ರಿ, ರಾಜಕಾರಣಿಗಳು ಯಾರಿಗಾದರೂ ಹೇಳಿದ್ದರೆ ಒಂದು ಗಂಟೆಯಲ್ಲಿ 30 ಲಕ್ಷ ರೂ. ಹಣ ತಂದಿಡುತ್ತಿದ್ದರು ಎಂದು ಶಾಸಕ ಡಾ॥ ಶಾಮನೂರು ಶಿವಶಂಕರಪ್ಪನವರು ತಮ್ಮ ಅಸಮಾಧಾನವನ್ನು ಖಡಕ್ ನುಡಿಗಳ ಮೂಲಕ ಇಂದಿಲ್ಲಿ ಸಭಿಕರ ಮುಂದೆ ಹಂಚಿಕೊಂಡರು.**

'ಜಿಲ್ಲಾ ಉತ್ಸವ'ದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಶಾಸಕರು, ಇಂತಹ ಸಭೆಗಳನ್ನು ಪಕ್ಷದವರು ವಹಿಸಿಕೊಳ್ಳಬಾರದು. ಜಿಲ್ಲಾ ಹಬ್ಬದ ವೇದಿಕೆ ಪಕ್ಷದ ವೇದಿಕೆ ಆಗಬಾರದು ಎಂದು ಹೇಳಿದ ಎಸ್ಸೆಸ್, ಜಿಲ್ಲಾ ಹಬ್ಬದ ಉದ್ಘಾಟನಾ ಸಮಾರಂಭದಲ್ಲಿ ಸಚಿವ ಎಸ್.ಎ.ರವೀಂದ್ರನಾಥ್ ಅವರ ಭಾಷಣದ ತುಂಡೊಂದನ್ನು ಉಲ್ಲೇಖಿಸಿ ಮಾತನಾಡಿ, ಜಿಲ್ಲೆಯ 7 ಕ್ಷೇತ್ರಗಳಲ್ಲಿ 6ರಲ್ಲಿ ಬಿಜೆಪಿ ಶಾಸಕರಿದ್ದಾರೆ. ಒಬ್ಬರೇ ಕಾಂಗ್ರೆಸ್ ಶಾಸಕರಿದ್ದಾರೆ ಎಂದು ಹೇಳಿರುವುದು ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದೆ ಎಂದು ಹೇಳಿದರು.

ವೇದಿಕೆಯಲ್ಲಿದ್ದ ಶಾಸಕ ಎಸ್.ವಿ.ರಾಮಚಂದ್ರ ಅವರ ಹೆಸರು ಹೇಳದೇ, ನಮ್ಮ ಪಕ್ಷದಿಂದ ಉಚ್ಛಾಟಿತಗೊಂಡ ಶಾಸಕರು ಇಲ್ಲೇ ಇದ್ದಾರೆ. ಹಾಗೆ ಹೇಳುವುದು ಸರಿ ಅಲ್ಲ. ಸಚಿವರು ಏನೇನೋ ಹೇಳಿದ್ದಾರೆ. ಆದರೆ, 10 ಬಿಜೆಪಿ ಸಚಿವರು ಎಲ್ಲಿಗೆ ಹೋಗಿದ್ದಾರೆಂಬುದನ್ನೂ ಹೇಳಬೇಕಾಗಿತ್ತೆಂದು ಹೇಳುವ ಮೂಲಕ, ವೇದಿಕೆಯಲ್ಲಿದ್ದ ಬಿಜೆಪಿ ನಾಯಕರಿಗೆ ನವಿರಾಗಿ ಚುಚ್ಚಿದರು.

ಹೀಗೆಲ್ಲಾ ಹೇಳುವುದನ್ನು ಬಿಟ್ಟು, ಜಿಲ್ಲೆಯನ್ನು ಅಭಿವೃದ್ಧಿ ಮಾಡಲಿ, ಬಿಜೆಪಿ ಏನು ಮಾಡಿದೆ ಹೇಳಲಿ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗಲೂ ಅನೇಕ ಕೆಲಸಗಳಾಗಿವೆ. ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ ದಿ॥ ಜೆ.ಹೆಚ್. ಪಟೇಲರನ್ನು ಎಲ್ಲರೂ ನೆನಪಿಸಿಕೊಳ್ಳಬೇಕು ಎಂದು ಹೇಳಿದರು.

ಸಚಿವ ಎಸ್.ಎ.ರವೀಂದ್ರನಾಥ್, 3 ದಿನಗಳ ಜಿಲ್ಲಾ ಉತ್ಸವ ಜನರ ಮೆಚ್ಚುಗೆ ಗಳಿಸಿದೆ ಎಂದರು. ಸಂಸದ ಜಿ.ಎಂ.ಸಿದ್ದೇಶ್ ತೋಟಗಾರಿಕೆ ರೈತರಿಗೆ ಬಹುಮಾನ ವಿತರಿಸಿ, ಜಿಲ್ಲಾ ಉತ್ಸವ ಜಿಲ್ಲೆಗೆ ಮೆರಗು ತಂದಿದೆ ಎಂದು ಹೇಳಿದರು.

ಶಾಸಕ ಎಸ್.ವಿ.ರಾಮಚಂದ್ರ, ಎಂ. ಬಸವರಾಜ ನಾಯ್ಕ, ಮೇಯರ್ ಹೆಚ್.ಎನ್.ಗುರುನಾಥ್, ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಎಸ್.ಎಂ.ವೀರೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯದರ್ಶಿ ಗುತ್ತಿ ಜಂಬುನಾಥ್, ಜಿಲ್ಲಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ, ಹೆಚ್ಚುವರಿ ಎಸ್.ಪಿ. ಬಿ.ಟಿ. ಚವ್ಹಾಣ್, ದೂಡಾ ಅಧ್ಯಕ್ಷ ಮಲ್ಲಿಕಾರ್ಜುನ್, ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಸರ್ಕಾರದ ಕಾರ್ಯದರ್ಶಿ ಅಶೋಕ್ ಕುಮಾರ್ ಮನೋಳಿ, ಸುಗಮ ಸಂಗೀತ ರಾಜ್ಯಾಧ್ಯಕ್ಷ ವೈ.ಬಿ.ಮುದ್ದುಕೃಷ್ಣ, ಜಿಲ್ಲಾ ಪಂಚಾಯ್ತಿ ಸದಸ್ಯ ನಾಗರಾಜ್ ಉಪಸ್ಥಿತರಿದ್ದರು.

ಕಳೆದ ಎರಡು ದಿನಗಳಿಂದ ವರ್ಣರಂಜಿತ ತುಂಗಭದ್ರ ವೇದಿಕೆಯಲ್ಲಿ ನೆರೆ ರಾಜ್ಯದ ಕಲಾವಿದರಿಂದ ನೃತ್ಯ, ವಚನ, ಜಾನಪದ ಗೀತೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು, ಮೂರನೇ ಮತ್ತು ಕೊನೆಯ ದಿನವಾದ ಇಂದೂ ಸಹ ನಡೆದವು.

ಅಸ್ಸಾಂ ರಾಜ್ಯದ ಬಿಹು ನೃತ್ಯ ಸಭಿಕರ ಗಮನ ಸೆಳೆಯಿತಲ್ಲದೇ, ಅಸ್ಸಾಂನ ಸಾಂಪ್ರದಾಯಿಕ ಉಡುಗೆ ದೊಡ್ಡ ಟೋಪಿಗಳನ್ನು ಅತಿಥಿಗಳಿಗೆ ಹಾಕಿ ಸಂತಸ ಪಟ್ಟರು.

# ನಗರ ಪಾಲಿಕೆ ನೂತನ ವಿಸ್ತರಣಾ ಕಛೇರಿ ಕಟ್ಟಡ ಉದ್ಘಾಟನೆ



ದಾವಣಗೆರೆ, ಫೆ. 13- ಮಹಾನಗರ ಪಾಲಿಕೆ ನೂತನ ವಿಸ್ತರಣಾ ಕಛೇರಿ ಕಟ್ಟಡ ಉದ್ಘಾಟನೆಯನ್ನು ಇಂದು ಸಚಿವರಾದ ಎಸ್.ಎ. ರವೀಂದ್ರನಾಥ್ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನೂತನ ವಿಸ್ತರಣಾ ಕಛೇರಿಯನ್ನು ಶೀಘ್ರ ಪೂರ್ಣಗೊಳಿಸಿ, ಪೀಠೋಪಕರಣಗಳನ್ನು ಅಳವಡಿಸಬೇಕು. ಸುಸಜ್ಜಿತವಾದ ಕಛೇರಿ ಸಾರ್ವಜನಿಕರಿಗೆ ಲಭ್ಯವಾಗಬೇಕೆಂದು ಹೇಳಿದರು.

ನಗರಪಾಲಿಕೆ ಸದಸ್ಯರು ಪ್ರಚಾರಕ್ಕಾಗಿ ಕೆಲಸ ಮಾಡದೇ ನಗರದ ಅಭಿವೃದ್ಧಿಗಾಗಿ ಶ್ರಮಿಸಬೇಕು. ಹೇಳುವುದಕ್ಕಿಂತ ಮಾಡಿ ತೋರಿಸಬೇಕು. ಸರ್ಕಾರದಿಂದ ಅನುದಾನವನ್ನು ಒದಗಿಸಲು ನಾವು ಸಿದ್ಧವಿದ್ದು, ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕೆಂದು ತಾಕೀತು ಮಾಡಿದರು.

ಇನ್ನು ಕೇವಲ ಒಂದು ವರ್ಷ ಅವಧಿ ಉಳಿದಿದ್ದು, ರಾಜ್ಯದಲ್ಲಿಯೇ ಉತ್ತಮ ನಗರ ಪಾಲಿಕೆ ಎಂಬುದನ್ನು ತೋರಿಸಿದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಆಡಳಿತಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಫುಟ್‌ಬಾಲ್ ಆಟಗಾರರು ಸಾಮೂಹಿಕವಾಗಿ ಗೆಲುವು ಸಾಧಿಸುವಂತೆ ಮಹಾನಗರ ಪಾಲಿಕೆ ಸದಸ್ಯರೆಲ್ಲರೂ ಪಕ್ಷಬೇಧ ಮರೆತು ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕೆಂದು ಕರೆ ನೀಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು, ತೆರಿಗೆಯನ್ನು ಬಿಗಿಯಾಗಿ ವಸೂಲಿ ಮಾಡಿದರೆ ಮಾತ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯ ಎಂದು ಹೇಳಿದರು.

ಮಹಾನಗರ ಪಾಲಿಕೆ ಮಹಾಪೌರ ಹೆಚ್.ಎನ್. ಗುರುನಾಥ್, ವಿರೋಧ ಪಕ್ಷದ ನಾಯಕ ಡಿ.ಎನ್. ಜಗದೀಶ್ ಮತ್ತಿತರರು ಮಾತನಾಡಿದರು.

ವೇದಿಕೆ ಮೇಲೆ ಉಪ ಮಹಾಪೌರರಾದ ಶ್ರೀಮತಿ ರತ್ನಾಬಾಯಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ. ಮಲ್ಲಿಕಾರ್ಜುನಪ್ಪ, ನಗರ ಪಾಲಿಕೆ ಆಯುಕ್ತ ಪ್ರಸನ್ನಕುಮಾರ್, ಸದಸ್ಯರಾದ ಹೆಚ್.ಎನ್. ಶಿವಕುಮಾರ್, ಹೆಚ್.ಎಂ. ರುದ್ರಮುನಿಸ್ವಾಮಿ, ಮಹೇಶ್ ರಾಯಚೂರ್, ಶ್ರೀಮತಿ ಸೌಭಾಗ್ಯ ಮುಕುಂದ, ಶ್ರೀಮತಿ ಕೆ. ಸುಶೀಲಮ್ಮ ಮಂಜುನಾಥ್, ಬಾ.ಮ. ಬಸವರಾಜಯ್ಯ, ಶ್ರೀಮತಿ ಸುಧಾ ಜಯರುದ್ರೇಶ್, ಎಂ.ಎಸ್. ವಿಠಲ್ ಮತ್ತಿತರರು ಉಪಸ್ಥಿತರಿದ್ದರು.

### ಇಸ್ರೇಲ್ ರಾಯಭಾರಿ ಕಾರು ಸ್ಫೋಟ

ನವದೆಹಲಿ, ಫೆ. 13 - ಇಸ್ರೇಲ್ ರಾಯಭಾರಿ ಕಛೇರಿ ಬಳಿ ಅದರ ಕಾರೊಂದು ಸ್ಫೋಟಗೊಂಡಿದೆ. ಜಾರ್ಜಿಯಾದ ರಾಜಧಾನಿ ಟಿಬಿಲಿಸ್ ನಲ್ಲೂ ಸಹ ಇದೇ ರೀತಿಯ ಸ್ಫೋಟ ನಡೆಸುವ ಯತ್ನ ವಿಫಲವಾಗಿದೆ.

## ಡಿಡಿಸಿಸಿ ಅಧ್ಯಕ್ಷರಾಗಿ ಬಾಡದ ಪ್ರಕಾಶ್



ದಾವಣಗೆರೆ,ಫೆ.13- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ಬಾಡದ ಪ್ರಕಾಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಡಿಡಿಸಿಸಿ ಬ್ಯಾಂಕಿನ ಕೇಂದ್ರ ಕಛೇರಿ ಸಭಾಂಗಣದಲ್ಲಿ ಹಿರಿಯ ನಿರ್ದೇಶಕ ಬಿ.ವಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು.

ನಿರ್ದೇಶಕರುಗಳಾದ ಪಿ.ಎಸ್. ಹನುಮಂತಪ್ಪ, ಜೆ.ಎಸ್.ವೇಣುಗೋಪಾಲ ರೆಡ್ಡಿ, ಕೆ.ಹೆಚ್.ಷಣ್ಮುಖಪ್ಪ, ಆರ್. ಎಲ್. ಪ್ರಭಾಕರ್, ಬಿ.ಹೆಚ್.ಬಸವರಾಜಪ್ಪ, ಬಿ.ಜಿ.ಬಸವರಾಜಪ್ಪ, ಏಕನಾಥ ಡಿ. ರಾಯ್ಕರ್, ಮೆಳ್ಳೇಕಟ್ಟೆ ಬಸವರಾಜಪ್ಪ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

## ಆತ್ಮಹತ್ಯೆಗೀಡಾದ ರೈತ ಕುಟುಂಬಗಳಿಗೆ 'ರೈತ ಕಲ್ಯಾಣ ಕೇಂದ್ರ'

ಬೆಂಗಳೂರು, ಫೆ. 13 - ಸಾಲದ ಬಾಧೆಗೆ ತುತ್ತಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಪುನರುಜ್ಜೀವನಕ್ಕಾಗಿ ರೈತ ಕಲ್ಯಾಣ ಕೇಂದ್ರ ಆರಂಭಿಸುವುದಾಗಿ ಮುಖ್ಯಮಂತ್ರಿ ಡಿ.ವಿ ಸದಾನಂದಗೌಡ ಇಂದಿಲ್ಲಿ ಪ್ರಕಟಿಸಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದ್ದ 'ರೈತೋತ್ಸವ-2012' ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೈತ ಕಲ್ಯಾಣ ಕೇಂದ್ರ ತೆರೆಯುವ ಸಂಬಂಧ ಮುಂದಿನ ಮುಂಗಡ ಪತ್ರದಲ್ಲಿ ಪ್ರಕಟಿಸುವ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ದಾವಣಗೆರೆಯಲ್ಲಿ ಸೋಮವಾರ ಸಮಾರೋಪಗೊಂಡ ಮೂರು ದಿನಗಳ ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎ.ರವೀಂದ್ರನಾಥ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಡಾ.ಎ.ಹೆಚ್.ಶಿವಯೋಗಿಸ್ವಾಮಿ ಅವರುಗಳೂ ಸೇರಿದಂತೆ, ಎಲ್ಲಾ ಅತಿಥಿ ಗಣ್ಯರಿಗೆ ಅಸ್ಸಾಂನ ಕಲಾವಿದರು ತಮ್ಮ ರಾಜ್ಯದ ಸಾಂಪ್ರದಾಯಿಕ ಉಡುಗೆ ದೊಡ್ಡ ಟೋಪಿಗಳನ್ನು ಹಾಕಿ ಸಂತಸ ಪಟ್ಟರು.

# ಗ್ರಾಮೀಣ ಆಟಗಳಿಗೆ ಬಾಲ ವಿಕಾಸದಿಂದ ಪುನರುಜ್ಜೀವನ

## ಧಾರವಾಡ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಮಹೇಶ್ ತೆಂಗಿನಕಾಯಿ

ದಾವಣಗೆರೆ, ಫೆ. 13 - ಜಿಲ್ಲಾ ಉತ್ಸವದ ನಿಮಿತ್ತ ಮಕ್ಕಳಿಗಾಗಿ ಧಾರವಾಡದ ಬಾಲ ವಿಕಾಸ ಅಕಾಡೆಮಿ ನೆರವಿನೊಂದಿಗೆ ಜಿಲ್ಲಾ ಕ್ರೀಡಾಂಗಣದಲ್ಲಿಂದು ಮಕ್ಕಳ ಹಬ್ಬ ಆಚರಣೆ ಹಮ್ಮಿಕೊಳ್ಳಲಾಗಿತ್ತು.

ಡಾ॥ ಶಿವರಾಮ ಕಾರಂತರು, ಖ್ಯಾತ ಜಾನಪದ ತಜ್ಞ ಮುದೇನೂರು ಸಂಗಣ್ಣನವರಂತಹ ಕವಿಗಳ ಹೆಸರಿನಲ್ಲಿ ಹಲವಾರು ಪ್ರತ್ಯೇಕ ವೇದಿಕೆಗಳಲ್ಲಿ ಆಟ್ಯಾ ಪಾಟ್ಯಾ, ಬುಗುರಿ, ಹಗ್ಗ ಜಗ್ಗಾಟ, ಸಾಹಸ ಕ್ರೀಡೆ, ವಾಲ್ ಕ್ಲೈಂಬಿಂಗ್, ರಿವರ್ ಕ್ರಾಸಿಂಗ್‌ನಂತಹ ಆಟಗಳಿಗಾಗಿ ಮತ್ತು ಕರಕುಶಲ ಕಲೆ, ಜೇಡಿ ಮಣ್ಣಿನ ಕಲೆ ಪ್ರದರ್ಶನಕ್ಕಾಗಿ ಹೆಸರು ನೋಂದಾಯಿಸಿಕೊಂಡು ಸ್ಪರ್ಧೆ ಏರ್ಪಟ್ಟಿತ್ತು.

ಆಟಗಳ ಆರಂಭಕ್ಕೂ ಮುನ್ನ ನಡೆದ ಉದ್ಘಾಟನಾ ಸಮಾರಂಭದಲ್ಲಿ ಧಾರವಾಡದ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಮಹೇಶ್ ತೆಂಗಿನಕಾಯಿ ಮಾತನಾಡಿ, ಮಕ್ಕಳ ಪ್ರತಿಭೆ ಗುರುತಿಸಲು ಇದು ವೇದಿಕೆ ಆಗಿದೆ. ನಶಿಸುತ್ತಿರುವ ಗ್ರಾಮೀಣ ಕ್ರೀಡೆಗಳನ್ನು ಬಾಲ ವಿಕಾಸ ಅಕಾಡೆಮಿಯಿಂದ ಪುನರುಜ್ಜೀವನಗೊಳಿಸಲಾಗುತ್ತಿದೆ. ಶಾಲಾ ಮಕ್ಕಳಿಗಾಗಿ 'ಮಕ್ಕಳೇ ಪರೀಕ್ಷೆಗೆ ಸಿದ್ಧರಾಗಿ' ಎಂಬ ಕಾರ್ಯಕ್ರಮ ಹಮ್ಮಿಕೊಂಡು ಪರೀಕ್ಷೆ ಎದುರಿಸಲು ತರಬೇತಿ ಕೊಡಲಾಗುತ್ತಿದೆ ಎಂದು ಹೇಳಿದರು.

ಸಚಿವ ಎಸ್.ಎ.ರವೀಂದ್ರನಾಥ್ ಉದ್ಘಾಟಕರಾಗಿ ಮಾತನಾಡಿ, ಜಿಲ್ಲಾ ಉತ್ಸವ ಕೇವಲ ಮನರಂಜನೆಗೆ ಮೀಸಲಾಗಿರಬಾರದೆಂದು ಈ 'ಮಕ್ಕಳ ಹಬ್ಬ' ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಶಿಕ್ಷಣ ಇಲಾಖೆಯವರು ದಾವಣಗೆರೆ ಜಿಲ್ಲೆ ಈ ಸಲ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 5ನೇ ಸ್ಥಾನದೊಳಗೆ ಬರುವಂತೆ ಫಲಿತಾಂಶ ಉತ್ತಮ ಪಡಿಸಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಎಸ್.ಎಂ.ವೀರೇಶ್ ಮಕ್ಕಳ ಹಬ್ಬಕ್ಕೆ ಅಧಿಕಾರಿಗಳು ಪ್ರೋತ್ಸಾಹಿಸಲಿ ಎಂದು ಹೇಳಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮದ ಮಕ್ಕಳು ಸುಶ್ರಾವ್ಯವಾಗಿ ಪ್ರಾರ್ಥನಾ ಗೀತೆ ಹಾಡಿದರು.

ಶಾಸಕ ಬಸವರಾಜನಾಯ್ಕ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿಗಳ ಶ್ರಮದಿಂದಾಗಿ ಜಿಲ್ಲಾ ಉತ್ಸವ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದರು.

ಜಿಲ್ಲಾಧಿಕಾರಿ ಪಟ್ಟಣಶೆಟ್ಟಿ, ಮುಖ್ಯ ಕಾರ್ಯದರ್ಶಿ ಗುತ್ತಿ ಜಂಬುನಾಥ್, ಪಾಲಿಕೆ ಮೇಯರ್ ಹೆಚ್.ಎನ್.ಗುರುನಾಥ್, ಉಪ ನಿರ್ದೇಶಕ ವಾಸುದೇವ್ ಉಪಸ್ಥಿತರಿದ್ದರು.

## ನೋಟಿಸ್‌ಗೆ ಉತ್ತರಿಸಲು ಸಮಯ ಬೇಕು : ಬ್ಲೂ ಫಿಲ್ಮ್ ಸಚಿವರ ಮನವಿ

ಬೆಂಗಳೂರು, ಫೆ. 13 - ವಿಧಾನಸಭೆಯಲ್ಲಿ ಕುಳಿತು ಬ್ಲೂ ಫಿಲ್ಮ್ ವೀಕ್ಷಿಸಿದ ಆರೋಪಕ್ಕೆ ಗುರಿಯಾಗಿರುವ ಮೂವರು ಮಾಜಿ ಸಚಿವರು, ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರಿಸಲು ಇನ್ನೂ ಒಂದು ವಾರದ ಕಾಲಾವಕಾಶ ನೀಡಬೇಕು ಎಂದು ಸಭಾಧ್ಯಕ್ಷರಿಗೆ ಮನವಿ ಮಾಡಿಕೊಂಡಿದ್ದಾರೆ.

ಮಾಜಿ ಸಚಿವರಾದ ಲಕ್ಷ್ಮಣ ಸವದಿ, ಸಿ.ಸಿ.ಪಾಟೀಲ್ ಹಾಗೂ ಕೃಷ್ಣ ಪಾಲೇಮಾರ್ ಅವರುಗಳು ಈ ಸಂಬಂಧ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಅವರಿಗೆ ಪತ್ರ ಬರೆದು ತಮ್ಮ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಸಮಯಾವಕಾಶದ ಅಗತ್ಯವಿದೆ ಎಂದಿದ್ದಾರೆ.


ಬ್ಲೂ ಫಿಲ್ಮ್ ವೀಕ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೂವರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿದ್ದ ವಿಧಾನಸಭಾಧ್ಯಕ್ಷರು ಫೆಬ್ರವರಿ 13 ರ ಬೆಳಿಗ್ಗೆ 10:30 ಗಂಟೆಯೊಳಗಾಗಿ ಉತ್ತರಿಸುವಂತೆ ಗಡುವು ನೀಡಿದ್ದರು.

ಭಕ್ತಿ ಪೂರ್ವಕ ಅಭಿನಂದನೆಗಳು



ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿರುವ
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಶಾಖೆ ಸಾಣೇಹಳ್ಳಿ ಮಠದ ಪಟ್ಟಾಧ್ಯಕ್ಷರಾದ
ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರಿಗೆ
ಭಕ್ತಿ ಪೂರ್ವಕ ಅಭಿನಂದನೆ.


ಸಿಮೆಂಟ್ ಮತ್ತು ಸ್ಟೀಲ್ ಅಧಿಕೃತ ಮಾರಾಟಗಾರರು, ದಾವಣಗೆರೆ



ಅಣಬೇರು ಮಹೇಶ್ವರಪ್ಪ
ಶಿವ ನಾರದಮುನಿ ಎಂಟರ್‌ಪ್ರೈಸಸ್



ಟಿ.ಜಿ. ಅರವಿಂದ್
ಪೂಜಾ ಟ್ರೇಡಿಂಗ್ ಕಾರ್ಪೊರೇಷನ್



ಬಿ.ಟಿ. ನಾಗರಾಜ್
ಶ್ರೀ ಸಿದ್ದೇಶ್ವರ ಸಿಮೆಂಟ್ & ಸ್ಟೀಲ್ಸ್



ಬೂದಿಹಾಳ್ ಟಿ. ಮಲ್ಲೇಶಪ್ಪ
ಶ್ರೀ ರೇಣುಕಾ ಸ್ಟೀಲ್ಸ್ & ಸಿಮೆಂಟ್ಸ್



ಬಿ.ಆರ್. ನಾಗರಾಜ್
ವಿಘ್ನೇಶ್ವರ ಸಿಮೆಂಟ್ಸ್ & ಹಾರ್ಡ್‌ವೇರ್ಸ್



ಕುಂಬಳೂರು ನಿಜಲಿಂಗಪ್ಪ
ಶ್ರೀ ಮಂಜುನಾಥ್ ಎಂಟರ್‌ಪ್ರೈಸಸ್



ಎಸ್. ಲಿಂಗರಾಜು
ಸಂಕೋಳ್ ಶಿವಪ್ಪ & ಸನ್ಸ್
ಶಾಮನೂರು

### ಖುರ್ಷೀದ್ ಹೇಳಿಕೆಗಳಿಗೆ ಪ್ರಣಬ್ ಆಕ್ಷೇಪ

ಅಲಹಾಬಾದ್, ಫೆ. 13 - ಕಾನೂನು ಸಚಿವ ಸಲ್ಮಾನ್ ಖುರ್ಷೀದ್ ಅವರು ಚುನಾವಣಾ ಆಯೋಗದ ಜೊತೆ ಜಟಾಪಟಿಗೆ ಮುಂದಾಗಿರುವುದು ಸರಿಯಲ್ಲ ಎಂದು ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಹೇಳಿದ್ದಾರೆ.



ದಾವಣಗೆರೆ
ಮಂಗಳವಾರ
33/19
ಗರಿಷ್ಠ/ ಕನಿಷ್ಠ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

### ಮಂಡಕ್ಕಿ ಮೆಣಸಿನ್ಕಾಯಿ

ಎಸ್.ಎಸ್.ಆನಂದ್




# 'ಸಂಭ್ರಮ 2012' ಸಿಡಿ ಬಿಡುಗಡೆ



ದಾವಣಗೆರೆ, ಫೆ. 13 - ನಗರದ ತ್ರಿಶೂಲ್ ಚಿತ್ರಮಂದಿರದಲ್ಲಿ ಸಿದ್ಧಗಂಗಾ ವಿದ್ಯಾಸಂಸ್ಥೆಯವರು ರೂಪಿಸಿದ 'ಸಂಭ್ರಮ 2012' ಸಿ.ಡಿ.ಯನ್ನು ಜನತಾವಾಣಿ ಸಂಪಾದಕರಾದ ಎಂ.ಎಸ್.ವಿಕಾಸ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೌಲ್ಯಯುತ ಶಿಕ್ಷಣವನ್ನು ನೀಡುತ್ತಿರುವ ಸಿದ್ದಗಂಗಾ ಶಾಲೆಯ ಹಳೆಯ ವಿದ್ಯಾರ್ಥಿ ನಾನು ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಿದ್ಧಗಂಗಾ ಶಾಲೆಯಲ್ಲಿ ಓದುವಾಗ ಆಗಿರುವ ಅನುಭವಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವುದಾಗಿ ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಿದ್ದಗಂಗಾ ಸಂಸ್ಥೆಯ ಸಂಸ್ಥಾಪಕ ಎಂ.ಎಸ್.ಶಿವಣ್ಣ ವಹಿಸಿದ್ದರು.

ಸಿದ್ಧಗಂಗಾ ಶಾಲೆಯ ಮಕ್ಕಳ ವಾರ್ಷಿಕ ಶೈಕ್ಷಣಿಕ ಪ್ರವಾಸದ 'ಸಂಭ್ರಮ 2012' ಚಿತ್ರವನ್ನು ಪರದೆಯ ಮೇಲೆ ನೋಡಿ ಸಂಭ್ರಮಪಟ್ಟರು. ಸಿದ್ದಗಂಗಾ ಶಾಲೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜಾ ಅವರು ಸ್ವಾಗತಿಸಿದರು.

## ಕರ್ನಾಟಕಕ್ಕೆ 9.85 ಲಕ್ಷ ಕೋಟಿ ರೂ. ಹೂಡಿಕೆ

ಬೆಂಗಳೂರು, ಫೆ. 13 - ಕರ್ನಾಟಕ ಹೂಡಿಕೆಗೆ ಐದನೇ ಅತ್ಯಂತ ಆಕರ್ಷಕ ತಾಣವಾಗಿದ್ದು, 2011ರ ಅಂತ್ಯಕ್ಕೆ 9.85 ಲಕ್ಷ ಕೋಟಿ ರೂ.ಗಳ ಹೂಡಿಕೆ ಪ್ರಸ್ತಾವನೆಗಳು ಹರಿದು ಬಂದಿವೆ ಎಂದು ಔದ್ಯಮಿಕ ಸಂಘಟನೆಯಾದ ಅಸೋಚಾಮ್ ತಿಳಿಸಿದೆ.

ವರ್ಷದ ಅಂತ್ಯದಲ್ಲಿ ಭಾರತಕ್ಕೆ 120.34 ಲಕ್ಷ ಕೋಟಿ ರೂ.ಗಳ ಹೂಡಿಕೆ ಪ್ರಸ್ತಾವನೆ ಬಂದಿವೆ. ಇದರಲ್ಲಿ ಕರ್ನಾಟಕದ ಪಾಲು ಶೇ.8.18 ಎಂದು ಅಸೋಚಾಮ್ ತಿಳಿಸಿದೆ. ಗುಜರಾತ್, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಒರಿಸ್ಸಾ ಹಾಗೂ ಕರ್ನಾಟಕಗಳು ಹೂಡಿಕೆದಾರರ ನೆಚ್ಚಿನ ತಾಣಗಳಾಗಿವೆ.

ಕರ್ನಾಟಕಕ್ಕೆ ದೊರೆತಿರುವ ಪ್ರಸ್ತಾವಗಳಲ್ಲಿ ಶೇ.38.9ರಷ್ಟು ಉತ್ಪಾದನಾ ವಲಯ, ಶೇ.24.6ರಷ್ಟು ಸೇವಾ ವಲಯಕ್ಕೆ ಸೇರಿದವುಗಳಾಗಿವೆ.

### ಬ್ಲೂ ಫಿಲ್ಮ್ ಸಚಿವರ ವಿರುದ್ಧ ತನಿಖೆಗೆ ಕೋರ್ಟ್ ಆದೇಶ

ಬೆಂಗಳೂರು, ಫೆ. 13 - ವಿಧಾನ ಸಭೆಯಲ್ಲಿ ಸಚಿವರು ಬ್ಲೂ ಫಿಲ್ಮ್ ವೀಕ್ಷಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ನೀಡುವಂತೆ ನಗರದ 8 ನೇ ಎಸಿಎಂಎಂ ನ್ಯಾಯಾಲಯ ವಿಧಾನಸೌಧ ಪೊಲೀಸರಿಗೆ ಇಂದಿಲ್ಲಿ ಆದೇಶ ನೀಡಿದೆ.

ವಕೀಲ ಧರ್ಮಪಾಲ್ ಗೌಡ ಸಲ್ಲಿಸಿದ ರಿಟ್ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಎಂಟನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶ ಕಿರಣ್ ಖೇಣಿ ಈ ಆದೇಶ ನೀಡಿ, ಫೆಬ್ರವರಿ 27 ರೊಳಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ.

ಮಾಜಿ ಸಚಿವರಾದ ಲಕ್ಷ್ಮಣ ಸವದಿ, ಸಿ.ಸಿ.ಪಾಟೀಲ್ ಹಾಗೂ ಕೃಷ್ಣ ಪಾಲೇಮಾರ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಿರುವ ಧರ್ಮಪಾಲಗೌಡ ಸಿಆರ್‌ಪಿಸಿ ಕಲಂ ನಂಬರ್ 190(1)200 ಮತ್ತು 202(1) ಪ್ರಕಾರ ಇವರ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು.

ಫೆಬ್ರವರಿ 7 ರಂದು ಶಾಸನ ಸಭೆಯಲ್ಲಿ ಬರಗಾಲದ ಬಗ್ಗೆ, ರೈತರ ಜ್ವಲಂತ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಮೂವರು ಆರೋಪಿಗಳಲ್ಲಿ

(4ನೇ ಪುಟಕ್ಕೆ)

## ಬೇಕಾಗಿದ್ದಾರೆ

ಕಂಪ್ಯೂಟರ್ ಅಂಗಡಿಯಲ್ಲಿ ಪಿಯುಸಿ ಪಾಸ್ ಅಥವಾ ಫೇಲಾದ ಹಾಗೂ ಕಂಪ್ಯೂಟರ್ ಡಿಟಿಪಿ ಅನುಭವ ಇರುವವರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
**99645-45554**

## CHANGE OF NAME

I, Manjuamma, Resident of #1391, Anugraha Vidyanagar, Davanere-577005 has changed my name as Manjulamma W/o. A.k. Chowdappa on 09.02.2012 before Davangere Notary. In future all my records and documents will be in my new name as undersigned.

Sd/- **Manjulamma**
**W/o A.K. Chowdappa**

## WANTED

Tally Operate
Exp: Preferred
Walk in with Bio-data & Photo
**M/s Kishan Enterprises**
Beside Sree lodge,
P.B.Road, Davangere.

## ಬೇಕಾಗಿದ್ದಾರೆ

P.U.C. ಪಾಸಾದ 30 ವರ್ಷ ಒಳಗಿನ ಪುರುಷರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ : ಫೋ.: 99726 00713

## DIPLOMA TUTIONS

M1, M2, Science,
Electronics & CS Subject.
**Infinity Tech Education**
**93413-83275, 93797-82181**

S.S. 'B' Blockನಲ್ಲಿ 20X40 South, 30X40 South, 30X50 South, 30X50 East, 40X60 East, 40X60 West, 50X80 East, 55X82 North ಸೈಟುಗಳು ಮಾರಾಟಕ್ಕಿವೆ.
**ಐನಳ್ಳಿ ಚನ್ನಬಸಪ್ಪ**
ರಿಯಲ್ ಎಸ್ಟೇಟ್ ಏಜೆಂಟ್
**99166-12110**

## Soda hub WANTED

Sales Boys, Girls (3 No's)
**ಸೋಡಾ ಮಷಿನ್‌ಗಳಿಗಾಗಿ ಸಂಪರ್ಕಿಸಿ :**
*For Franchise Enquiries :*
**M/s Sree Enterprises**
# 3680/1-2, Boys Hostel Road, Dvg-4.
**72047-04424,94494-74521**

## ಇಂಗ್ಲೀಷ್ ಓದ್ಲಿಕ್ಕೆ ಬರಿಲಿಕ್ಕೆ ಕಷ್ಟನಾ 15 ದಿನದಲ್ಲಿ ಸುಲಭ ಮಾಡಿಕೊಡುತ್ತೇವೆ

**ಮಿರಜ್‌ಕರ್ ಟ್ಯುಟೋರಿಯಲ್**
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
**ಮೊಬೈಲ್ : 91416-25372**

## ತಾಯಿ ಹುದ್ದೆಗೆ ಮಹಿಳೆಯರು ಬೇಕಾಗಿದ್ದಾರೆ

ಎನ್.ಓ. ಎಸ್. ಬಾಲಗ್ರಾಮ ಬೆಂಗಳೂರು ಸಂಸ್ಥೆಯು ತಬ್ಬಲಿ, ನಿರ್ಗತಿಕ ಮಕ್ಕಳನ್ನು ಕೌಟುಂಬಿಕ ವಾತಾವರಣದಲ್ಲಿ ಬೆಳೆಸಿ ಶಾಶ್ವತ ನೆಲೆ ನೀಡುವ ಸಂಸ್ಥೆಯಾಗಿದೆ. ಈ ಬಾಲ ಗ್ರಾಮದಲ್ಲಿ ಪ್ರತಿ ಮನೆಯಲ್ಲಿ 8-10 ಮಕ್ಕಳಿದ್ದು, ಇವರಿಗೆ ಪ್ರೀತಿ, ಪ್ರೇಮ ಮತ್ತು ಭಾವನಾತ್ಮಕ ಬೆಂಬಲ ನೀಡಿ ಅವರ ಪಾಲನೆ, ಪೋಷಣೆ ಮಾಡುವ ಜವಾಬ್ದಾರಿಯುತ ತಾಯಂದಿರ ಹುದ್ದೆಗೆ ಮಹಿಳೆಯರ ಅವಶ್ಯಕತೆ ಇದೆ. ಅರ್ಹತೆಗಳು : ವಿದ್ಯಾರ್ಹತೆ : ಎಸ್ಸೆಸ್ಸೆಲ್ಸಿ (ಸಡಿಲಿಕೆ ಇದೆ). ವಯೋಮಿತಿ : 25 ರಿಂದ 35 ವರ್ಷ. ಇತರೆ: ವಿಧವೆ, ವಿಚ್ಛೇದಿತೆ, ಅವಿವಾಹಿತೆಯಾದ, ಸ್ವಂತ ಮಕ್ಕಳಿಲ್ಲದ ಒಂಟಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ. ಕನ್ನಡ ಭಾಷೆ ಬಲ್ಲವರಾಗಿರಬೇಕು. ಉತ್ತಮ ಆರೋಗ್ಯ ಹೊಂದಿರಬೇಕು. ಆಸಕ್ತ ಹಾಗೂ ಅರ್ಹತೆಯುಳ್ಳ ಮಹಿಳೆಯರು ದಿನಾಂಕ 19.2.2012ರಂದು ದಯವಿಟ್ಟು ಈ ಕೆಳಗಿನ ವಿಳಾಸದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬೇಕಾಗಿ ವಿನಂತಿ. ನೇರ ಸಂದರ್ಶನಕ್ಕೆ ಹಾಜರಾಗಬಯಸುವ ಮಹಿಳೆಯರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ನೋಂದಣಿ ಮಾಡಿಸುವುದು. ಸಂದರ್ಶನಕ್ಕೆ ಹಾಜರಾದವರಿಗೆ ಸಾಮಾನ್ಯ ದರ್ಜೆ ಪ್ರಯಾಣ ಭತ್ಯೆ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಉಚಿತ ಊಟ, ವಸತಿ, ಆಕರ್ಷಕ ವೇತನ ಮತ್ತು ಇತರೆ ಭತ್ಯೆ / ಸೌಲಭ್ಯಗಳನ್ನು ನೀಡಲಾಗುತ್ತದೆ.

ಸಂದರ್ಶನ ವಿಳಾಸ : **ಬದುಕು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೊ. 9980524111**
**ಗೋಪಾಲಪ್ಪರ ಕಾಂಪ್ಲೆಕ್ಸ್, ಮೊ. 93416-65360,** 4ನೇ ಮೇನ್,
1ನೇ ಕ್ರಾಸ್, ಮಧುರಾ ಹ್ಯಾಂಡ್ ಲೂಮ್ಸ್, ವಿನೋಬನಗರ, ದಾವಣಗೆರೆ.

## ವಿದೇಶ ಪ್ರಯಾಣ - ಶುಭ ಹಾರೈಕೆ


**ಆರ್. ಜಯಣ್ಣ**


**ಜಿ.ಬಿ. ವಿಜಯಕುಮಾರ್**

ದಿನಾಂಕ 15.02.2012 ರಂದು ಬೆಂಗಳೂರಿನಿಂದ ಬ್ಯಾಂಕಾಕ್ ಮತ್ತು ಪಟ್ಟಾಯ ದೇಶಗಳಿಗೆ ಪ್ರಯಾಣ ಬೆಳೆಸಲಿರುವ ದಾವಣಗೆರೆಯ ಗ್ರೀನ್ ಗೋಲ್ಡ್ ಕಂಪನಿಯ ಮೇನೇಜರ್ **ಆರ್. ಜಯಣ್ಣ,** ದಾವಣಗೆರೆಯ ಕೀರ್ತಿ ಆಗ್ರೋ ಟ್ರೇಡರ್ಸ್ ಮಾಲೀಕರಾದ **ಜಿ.ಬಿ. ವಿಜಯಕುಮಾರ್** ಅವರಿಗೆ ನಮ್ಮ ಶುಭ ಹಾರೈಕೆಗಳು.

**✦ ವಿ. ವರದರಾಜ್ ✦ ನಾಗರಾಜ್**
**ಸ್ನೇಹಿತರು ಮತ್ತು ಬಂಧು-ಮಿತ್ರರು.**

## ENGINEERING TUTIONS

M1, M2, M3, M4, Field Theory, Electronic Circuits, Signals & Systems. CS & IS Subject.
**Infinity Tech Education**
**93413-83275, 93797-82181**

## ಜಗಳೂರಿನಲ್ಲಿ ಸೈಟು ಮಾರಾಟಕ್ಕಿದೆ

ಶ್ರೀ ಶರಣ ಬಸವೇಶ್ವರ ಬಡಾವಣೆಯಲ್ಲಿ ಪೂರ್ವಕ್ಕಿರುವ 30x40 ಅಳತೆಯ ಸೈಟು ಮಾರಾಟಕ್ಕಿದೆ.
*ಆಸಕ್ತರು ಸಂಪರ್ಕಿಸಿ:*
**96207-46246**

## ವಾಸದ ಮನೆ ಭೋಗ್ಯಕ್ಕೆ ಇದೆ

ವಿನಾಯಕ ಬಡಾವಣೆ (ವಿದ್ಯಾನಗರ)ಯಲ್ಲಿ ಮೊದಲನೆ ಮಹಡಿಯ ಎರಡು ಬೆಡ್ ರೂಂ ಬೋರ್‌ವೆಲ್ ನೀರಿನ ಸೌಕರ್ಯವಿರುವ ವಾಸದ ಮನೆ 7ನೇ ಕ್ರಾಸ್‌ನಲ್ಲಿ ವಿನಾಯಕ ದೇವಸ್ಥಾನದ ಪಕ್ಕದಲ್ಲಿ ಭೋಗ್ಯಕ್ಕೆ ದೊರೆಯುತ್ತದೆ. ವಿಚಾರಿಸಿ :
**94487-27184**

## Video ತಂತ್ರಜ್ಞಾನ ಬಳಸಿ Fluent ಆಗಿ ಇಂಗ್ಲೀಷ್‌ನಲ್ಲಿ ಮಾತನಾಡಿ

15 ದಿನದಲ್ಲಿ ಅತ್ಯುತ್ತಮ ಫಲಿತಾಂಶ ಅಥವಾ ಹಣ ವಾಪಸ್
(VCD, Notes Free)
**ಮಿರಜ್‌ಕರ್ ಟ್ಯುಟೋರಿಯಲ್**
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
**ಮೊಬೈಲ್ : 91416-25372**

## ಮನೆ ಬಾಡಿಗೆಗೆ ಇದೆ

ಎಂ.ಸಿ.ಸಿ. ಬಿ ಬ್ಲಾಕ್ ಡೋರ್‌ನಂ. 3176, 2ನೇ ಕ್ರಾಸ್, 10ನೇ ಮೇನ್ (ಶಾಮನೂರು ಶಿವಶಂಕರಪ್ಪನವರ ಮನೆ ಹತ್ತಿರ) 3 ಬೆಡ್‌ರೂಂ, ಬೋರ್‌ವೆಲ್ ಹಾಗೂ ಮುನಿಸಿಪಲ್ ನೀರಿನ ಸೋಲಾರ್, ಕಾರ್ ಪಾರ್ಕಿಂಗ್ ವ್ಯವಸ್ಥೆಯಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
**ಮೊ : 97412-01427**

## ಕೆಲಸ ಖಾಲಿ ಇದೆ

SSLC/PUC Pass/Fail ಆದ ಹುಡುಗರು, Part Time/Full Time ಕೆಲಸಕ್ಕೆ ಬೇಕಾಗಿರುತ್ತಾರೆ.
**89700-11323**
**91413-20434**

## TO LET

2 Bed Rooms Houses for Rent or Lease. Contact : **Mr. David,** Near Bakkeshwara School, Door No. 2491, M.C.C. 'A' Block, 9th Cross, Davangere.
Cell No. : **94482-33494**

## ಬೇಕಾಗಿದ್ದಾರೆ

1) ಸ್ವಾಗತಕಾರಿಣಿ (ಮಹಿಳೆ),
2) ಅಡುಗೆ ಭಟ್ಟರು
3) ಓಪಿಡಿ ಸ್ಟಾಫ್ ನರ್ಸ್ (ಪುರುಷ)

ಸಂಪರ್ಕಿಸಿ : **ರವಿ ನರ್ಸಿಂಗ್ ಹೋಂ**
ಮಹಾವೀರ ರಸ್ತೆ, ದಾವಣಗೆರೆ.

## ಉಚಿತ ಕಂಪ್ಯೂಟರ್ ತರಬೇತಿ

ಇಂದೇ ಅರ್ಜಿ ಸಲ್ಲಿಸಿರಿ
**ಕ್ಲಾಸಿಕ್ ಕಂಪ್ಯೂಟರ್ಸ್**
**99022-38427**

## ಬೇಕಾಗಿದ್ದಾರೆ

ಡಿಗ್ರಿ ಆಗಿರುವ ತೋಟಗಾರಿಕೆ ಮತ್ತು ನರ್ಸರಿಯಲ್ಲಿ ಆಸಕ್ತಿಯಿರುವ ಇಬ್ಬರು ಹುಡುಗಿಯರು ಬೇಕಾಗಿದ್ದಾರೆ. ಒಳ್ಳೆಯ ಮಾತುಗಾರಿಕೆ ಇರುವವರಿಗೆ ಮೊದಲ ಆದ್ಯತೆ. ಕೆಲಸದ ವೇಳೆ : 9 ರಿಂದ 6.30ರ ವರೆಗೆ. ಆಸಕ್ತರು ಸಂಪರ್ಕಿಸಿ :
**08192-272990/91/92**
(ಬೆಳಿಗ್ಗೆ 10 ರಿಂದ 6 ರವರೆಗೆ)

## ತಕ್ಷಣವೇ ಬೇಕಾಗಿದ್ದಾರೆ

ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕಾರ್ಯನಿರ್ವಹಿಸಲು 6 ಜನ ಸೇಲ್ಸ್‌ಗರ್ಲ್ಸ್/ಸೇಲ್ಸ್ ಬಾಯ್ಸ್ ಮತ್ತು ಮನೆ ಕೆಲಸಕ್ಕೆ ಸಹಾಯಕರು ಬೇಕಾಗಿದ್ದಾರೆ. ಸಂಪರ್ಕಿಸಿ :
**ಶ್ರೀ ಲಕ್ಷ್ಮೀ ಫ್ಯಾಷನ್ಸ್**
ಚಾಮರಾಜಪೇಟೆ, ಕೋದಂಡರಾಯ ದೇವಸ್ಥಾನದ ಎದುರು, ದಾವಣಗೆರೆ.
**99644-66905, 98441-58445**

## ಶ್ರೀ ವೆಂಕಟೇಶ್ವರ ಜ್ಯೂಯಲರಿ ಮಾರ್ಟ್

ಅಕ್ಷತಾ ರೀಫೈನ್ಡ್ ಎಣ್ಣೆ ಅಂಗಡಿ ಎದುರು, ಚೌಕಿಪೇಟೆ, ದಾವಣಗೆರೆ-1.
**ದೂರವಾಣಿ : 254039, 225089.**
ಈ ಯೋಜನೆಯ ಹೊಸ ಗ್ರೂಪ್ ಪ್ರಾರಂಭಿಸಲಾಗಿದೆ. ದಿನಾಂಕ 15.02.2012ರಂದು ಪ್ರಥಮ ಡ್ರಾ ನಡೆಯಲಿದೆ. ಕೆಲವೇ ಸದಸ್ಯತ್ವಗಳು ಉಳಿದಿದ್ದು, ತತ್‌ಕ್ಷಣ ಸಂಪರ್ಕಿಸಿ :

## ಹಾರ್ದಿಕ ಅಭಿನಂದನೆಗಳು


**ಡಾ।। ಧನ್ಯಕುಮಾರ್ ಎನ್.ಎಂ.**


**ಡಾ।। ಜಯಕುಮಾರ್. ಟಿ.**

65ನೇ ರಾಷ್ಟ್ರೀಯ ಮಟ್ಟದ ದಂತ ವೈದ್ಯರ ಸಮ್ಮೇಳನವು ಇದೇ ಫೆಬ್ರವರಿ 10 ರಿಂದ 12 ವರೆಗೆ ಮುಂಬಯಿನಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ದಾವಣಗೆರೆ ಶಾಖೆಯ ದಂತ ವೈದ್ಯರು ಹಾಗೂ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಪ್ರೊಫೆಸರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿರುವ

**✧ ಡಾ।। ಎನ್.ಎಂ.ಧನ್ಯಕುಮಾರ್**
**ಇವರು ಅತ್ಯುತ್ತಮ ಸಿಡಿಇ ಛೇರ್ಮನ್‌ರಾಗಿ (ಸೈಂಟಿಫಿಕ್ ಆ್ಯಕ್ಟಿವಿಟಿ)**
**(ಡಾ।। ಕೆ.ಕೆ.ಮಿಸ್ಟ್ರಿ ಟ್ರೋಫಿ)**

**✧ ಡಾ।। ಜಯಕುಮಾರ್. ಟಿ**
**ಇವರು ಅತ್ಯುತ್ತಮ ಕಾರ್ಯದರ್ಶಿಯಾಗಿ ಪ್ರಶಸ್ತಿಯನ್ನು ಗಳಿಸಿರುತ್ತಾರೆ.**
**(ಡಾ।। ಐ.ಆರ್.ಗೋಯಲ್ ಪ್ರಶಸ್ತಿ)**

**ಇವರುಗಳಿಗೆ ಶುಭವನ್ನು ಕೋರುವವರು......**

- **ಡಾ।। ಶಿವಮೂರ್ತಿ. ಜಿ.ಟಿ. ದಾಗಿನಕಟ್ಟೆ,** ಪ್ರೊಫೆಸರ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.
- **ಡಾ।। ಲಕ್ಷ್ಮಿ ಅಮರ್,** ಪ್ರೊಫೆಸರ್, ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.
- **ಡಾ।। ಬಸವಣ್ಣ, ಆರ್.ಎಸ್.** ಪ್ರೊಫೆಸರ್, ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.

**ಡಾ।। ಪ್ರಕಾಶ್, ಡಾ।। ಸಾಮ್ರಾಟ್, ಡಾ।। ರಶ್ಮಿ, ಡಾ।। ಪಲ್ಲವಿ,**
**ಡಾ।। ಪವಿತ್ರಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು**
**ಪ್ಯಾರಾ ಡೆಂಟಲ್ ಸ್ಟಾಫ್ ಕನ್ಸ್‌ರೇಟಿವ್ ವಿಭಾಗ**
**ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.**

## ಸ್ಲಿಮ್ N ಟ್ರಿಮ್ / Slim N Trim

**30 ದಿನಗಳ**
**ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ**
**Anty Obesity Camp**
**ದಿನಾಂಕ 16.2.2012ರಿಂದ ಪ್ರಾರಂಭ**

**ಶಿಬಿರ ಶುಲ್ಕ** ~~4000~~ ರೂ. ಈಗ ಕೇವಲ 2500 ರೂ.

100% ಔಷಧಿ ರಹಿತ ನ್ಯೂರೋಥೆರಪಿ ಚಿಕಿತ್ಸೆ ಮತ್ತು ವ್ಯವಸ್ಥಿತ ಡಯಟ್ ಪ್ಲ್ಯಾನ್ ಮೂಲಕ ಕಳೆದ 5-6 ವರ್ಷಗಳಲ್ಲಿ ಸಾವಿರಾರು ಜನ ಅತೀ ಉತ್ತಮ ಸರಾಸರಿ ತಿಂಗಳಲ್ಲಿ 8-10ಕೆ.ಜಿ. ತೂಕ ಕಡಿಮೆ ಮಾಡಿಕೊಂಡಿರುತ್ತಾರೆ. ಮಹಿಳೆಯರಿಗೆ ಪ್ರತ್ಯೇಕ ಚಿಕಿತ್ಸೆಯ ವ್ಯವಸ್ಥೆ ಇರುತ್ತದೆ.

ಆಸಕ್ತರು ದಿನಾಂಕ 16/17/18-2-2012 ದಿನಾಂಕದಂದು ಹೆಸರು ನೋಂದಾಯಿಸಲು ಸಂಪರ್ಕಿಸಬಹುದು.

ಸ್ಥಳ : **ನ್ಯುರೋಥೆರಪಿ ಕ್ಲಿನಿಕ್**
#ದಿವ್ಯಯೋಗ ಮಂದಿರ
3ನೇ ಮೇನ್, ಡೆಂಟಲ್ ಬಾಯ್ಸ್ ಹಾಸ್ಟೆಲ್ ಎದುರಿಗೆ
ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ - 577 004.
ಫೋನ್ : 08192-220480, ಮೊಬೈಲ್ : 99726-00713

## ಹಾಲ್ ಬಾಡಿಗೆಗೆ ಇದೆ

ಕೆ.ಬಿ. ಬಡಾವಣೆ, ಬಳ್ಳಾರಿ ಸಿದ್ದಮ್ಮ ಪಾರ್ಕ್ ಎದುರು, ಡೋರ್ ನಂ. 633ರಲ್ಲಿ 1st Floor 26X50 ಅಡಿ ಅಳತೆಯ ಒಂದೇ ಹಾಲು ಬ್ಯಾಂಕ್, ಆಫೀಸ್, ಮೆಡಿಕಲ್‌ಗೆ ಅನುಕೂಲವಾಗಿರುತ್ತದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ). ಸಂಪರ್ಕಿಸಿ :
**232865, 96111-65460**

## ಬಾಡಿಗೆಗಿದೆ

ಬಸಾಪುರ ರಸ್ತೆ, ಬಂಬೂ ಬಜಾರ್ ಹಿಂಭಾಗದಲ್ಲಿ 140x45, 25x60 ಅಳತೆಯ ಎರಡು ಗೋಡಾನ್‌ಗಳು ಮತ್ತು ಅವುಗಳ 3 ಎಕರೆ ಜಮೀನು ಹಾಗೂ ಪಿ.ಜೆ. ಬಡಾವಣೆಗೆ 8th Main, 18ನೇ ಕ್ರಾಸ್‌ನಲ್ಲಿ ನೆಲ ಮತ್ತು ಮೊದಲನೆ ಮಹಡಿ 920x920 ಕಟ್ಟಡ ಬಾಡಿಗೆಗಿದೆ.
**94480-28103**

## WANTED

Female Candidate required for Auditor Office having computer knowledge (Microsoft Excel & Word) B.Com.
Salary Rs. 3,000/- Contact :
**94802-97820**

## ಬೇಕಾಗಿದ್ದಾರೆ

ಹೋಲ್‌ಸೇಲ್ ಔಷಧ ಅಂಗಡಿಯಲ್ಲಿ ಔಷಧಗಳನ್ನು ಪ್ಯಾಕ್ ಮಾಡಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 ವರ್ಷದವರಿರಬೇಕು. ಭೇಟಿಯ ಸಮಯ : ಸಂಜೆ 6.30 ರಿಂದ 7.30 ರವರೆಗೆ.
ವಿಳಾಸ : **ಶ್ರೀ ಗುರು ಎಂಟರ್‌ಪ್ರೈಸಸ್**
ಡೋ.ನಂ. 579, 6ನೇ ಮುಖ್ಯರಸ್ತೆ,
ಪಿ.ಜೆ. ಬಡಾವಣೆ, ದಾವಣಗೆರೆ-4.

## ಮನೆ ಬಾಡಿಗೆಗಿದೆ

ವಾಸ್ತು ಪ್ರಕಾರ, ನೀರಿನ ಸೌಕರ್ಯ ಇರುವ ಸಿಂಗಲ್ ಬೆಡ್ ರೂಂ ಮನೆ, 2ನೇ ಅಂತಸ್ತಿನಲ್ಲಿ ಬಾಡಿಗೆಗೆ ಇದೆ. ಡೋರ್ ನಂಬರ್ 1700, 18ನೇ ಕ್ರಾಸ್, ಕೆಟಿಜೆ ನಗರ, ಕೆಇಬಿ ಆಫೀಸ್ ಎದುರಿನಲ್ಲಿದೆ.
*ಸಂಪರ್ಕಿಸಿ:* **95914-10526**

## MTS Broad band

Modem Cost - 699 only. Post Paid with wireless 'Mouse' Free. Offer till-15 th 02.2012
*Contact:* **Mr. Suresh**
**91413-80425**

ಶ್ರೀ ವೆಂಕಟೇಶ್ವರ ನಿವಾಸ

## ರೂಂಗಳು ಬಾಡಿಗೆ ದೊರೆಯುತ್ತವೆ

ಅಕ್ಕಮಹಾದೇವಿ ರಸ್ತೆ, ಪಿ.ಜೆ ಬಡಾವಣೆ, ವಿಜಯಾ ಹೋಟೆಲ್ ರಸ್ತೆ, ದಾವಣಗೆರೆ.
**ಮೊ: 95915-27201**

## ಮಾರಾಟಕ್ಕಿದೆ

ಉತ್ತಮ ಸ್ಥಿತಿಯಲ್ಲಿರುವ
**ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್**
ಮಾರಾಟಕ್ಕಿದೆ.
**ಸಂಪರ್ಕಿಸಿ : 94480-29277**

## ತಕ್ಷಣ ಬೇಕಾಗಿದ್ದಾರೆ

PUC, D.Ed, Diploma, BBM, B.Com, JOC, ITI, Degree ಆದ Age (18-26) ಆರಂಭದಿಂದಲೇ (6000/- ದಿಂದ 15000/-) PM ಗಳಿಸಬಹುದು. ತಮ್ಮ ಇತ್ತೀಚಿನ Photo, Biodata ದೊಂದಿಗೆ ನೇರವಾಗಿ ಸಂಪರ್ಕಿಸಿ : (11AM to 5.30 PM) ನೇರ ನೇಮಕಾತಿ.
**08192-270191**
**Arun - 90196-55500**

## REQUIRED

## immediately for a reputed firm

1. **OFFICE MANAGER :** Experienced in Educational Institution back ground
2. **MARKETING EXECUTIVE :** Experienced in selling Computer Hardware.
3. **MARKETING EXECUTIVE :** Experienced in Educational Institutional Sales.
4. **COUNSELLORS :** Preferably Female Candidate, knowledge of Computers.
5. **ACCOUNTANT :** Experienced Accounts, Knowledge of Tally and MS Office is a must.

Good spoken and written knowledge of English is must for all the position above.

Salary will be in par with the industry for good and experienced candidates. Fresher can also apply.

**Walk in interview on 14.02.2012, Time : 9.30 am Onwards.**

Venue : # 215/9, 'Nadigar Plaza' 1st Floor, 3rd Main, 5th Cross, P.J. Extension, Davangere-04
**Phone : 08192-656326, 80955-50751**
Land Mark : Near Unity Hospital, Above Laxmi Vilas Bank ATM, St. Paul's Convent Road.

## ಬೇಕಾಗಿದ್ದಾರೆ

P.U.C. ಪಾಸಾದ 30 ವರ್ಷ ಒಳಗಿನ ಮಹಿಳೆಯರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ : ಫೋ.: 99726 00713

## ಸೈಟ್... ಸೈಟ್... ಸೈಟ್...

20x30 ಕಾರ್ನರ್ ಸೈಟ್ ಕೇವಲ
**1 ಲಕ್ಷದ 99 ಸಾವಿರ**
ಪಕ್ಕಾ ಡೋರ್ ನಂಬರ್ ಸೈಟ್.
15x40, 40x30, 30x40
ರಿಂಗ್ ರಸ್ತೆ, ಹೊಸ ಆರ್‌ಟಿಓ ಹತ್ತಿರ.
**97407-69618**





**ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯನ್ನಾಗಿ ನನ್ನನ್ನು**
**ನೇಮಕ ಮಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ**
**ಶ್ರೀ ಕೆ. ಅಬ್ದುಲ್ ಜಬ್ಬಾರ್ ರವರಿಗೂ ಹಾಗೂ ಈ ನೇಮಕಕ್ಕೆ**
**ಶಿಫಾರಸ್ಸು ಮಾಡಿದ ಜನಪ್ರಿಯ ಶಾಸಕರಾದ**
**ಸನ್ಮಾನ್ಯ ಡಾ।। ಶಾಮನೂರು ಶಿವಶಂಕರಪ್ಪನವರಿಗೂ ಮಾಜಿ ಸಚಿವರೂ**
**ಯುವ ನೇತಾರರೂ ಆದ ಸನ್ಮಾನ್ಯ ಶ್ರೀ ಶಾಮನೂರು ಮಲ್ಲಣ್ಣ**
**ರವರಿಗೂ ಕಾಂಗ್ರೆಸ್ ಮುಂಖಡರಾದ ಶ್ರೀ ಶಾಮನೂರು ಗಣೇಶಣ್ಣ ರವರಿಗೂ**
**ಕೆ.ಪಿ.ಸಿ.ಸಿ. ಸದಸ್ಯರಾದ ಶ್ರೀ ಡಿ. ಬಸವರಾಜ್‌ರವರಿಗೂ**
**ಮತ್ತು ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ**
**ಹೃದಯ ಪೂರ್ವಕ ಕೃತಜ್ಞತೆಗಳು**



**ಬಸವರಾಜು ವಿ. ಶಿವಗಂಗಾ**
**ಕಾರ್ಯದರ್ಶಿ**
**ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ**

**ಶಿವಗಂಗಾ ಟ್ರೇಡರ್ಸ್ & ಟ್ರಾನ್ಸ್‌ಪೋರ್ಟ್ ಶಿವಗಂಗಾ ಫ್ಲೆಕ್ಸ್ ಪ್ರಿಂಟಿಂಗ್, ದಾವಣಗೆರೆ.**

## ಸೂರಗೊಂಡನಕೊಪ್ಪದಲ್ಲಿ ಇಂದು-ನಾಳೆ ಸೇವಾಲಾಲ್ ಜಯಂತಿ - ಮರಿಯಮ್ಮ ಜಾತ್ರೆ

ದಾವಣಗೆರೆ, ಫೆ.13- ಹೊನ್ನಾಳಿ ತಾಲ್ಲೂಕು ಸೂರಗೊಂಡನಕೊಪ್ಪದಲ್ಲಿ ನಾಳೆ ದಿನಾಂಕ 14 ಮತ್ತು 15 ರಂದು ಸಂತ ಶ್ರೀ ಸೇವಾಲಾಲ್ ಮಹಾರಾಜರ 273ನೇ ಜಯಂತ್ಯೋತ್ಸವ ಮತ್ತು ಮರಿಯಮ್ಮ ದೇವಿಯ ಜಾತ್ರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಗುವುದೆಂದು ಕರ್ನಾಟಕ ರಾಜ್ಯ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರೂ, ಮಾಯಕೊಂಡ ಶಾಸಕ ಎಂ. ಬಸವರಾಜನಾಯ್ಕ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಂಜಾರ ಜನಾಂಗದ ಆರಾಧ್ಯ ದೈವ ಸಂತ ಶ್ರೀ ಸೇವಾಲಾಲ್ ಮಹಾರಾಜ್ ಅವರು, ಧರಮಣಿ ಮಾತಾ ಮತ್ತು ಭೀಮಾನಾಯ್ಕರ ಮಗನಾಗಿ 1739 ರ ಫೆಬ್ರವರಿ 15 ರಂದು ಹೊನ್ನಾಳಿ ತಾಲ್ಲೂಕು ಸೂರಗೊಂಡನಕೊಪ್ಪದಲ್ಲಿ ಜನ್ಮ ತಾಳಿ, ಅನೇಕ ಪವಾಡಗಳನ್ನು ಮಾಡಿ, ತನ್ನ ಬಂಜಾರ (ಲಂಬಾಣಿ) ಜನತೆಗೆ ಹಾಗೂ ತನಗೆ ನಂಬಿದವರಿಗೆ ಸನ್ಮಾರ್ಗವನ್ನು ಹಾಕಿ ಕೊಟ್ಟ ದೈವಾಂಶ ಪುರುಷರೆಂದು ಅವರು ಬಣ್ಣಿಸಿದರು.

ಈ ಕಾರ್ಯಕ್ರಮದ ಅಂಗವಾಗಿ ನಾಳೆ ದಿನಾಂಕ 14ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ 50 ಜೊತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಭಾರೀ ಜಂಗಿ ಕಾಟಾ ನಿಕಾಲಿ ಕುಸ್ತಿಗಳು ನಡೆಯಲಿವೆ ಎಂದು ಪೈಲ್ವಾನ್ ಸುರೇಶ್ ನಾಯ್ಕ ತಿಳಿಸಿದ್ದಾರೆ.

ಅಪಾರ ಸಂಖ್ಯೆಯ ಭಕ್ತರು ಜಾತ್ರೆಯಂದು ನಾಡಿನ ನಾನಾ ಭಾಗಗಳಿಂದ ವ್ರತ ಮಾಡಿ ಈ ಗ್ರಾಮಕ್ಕೆ ಮಾಲೆ ಧರಿಸಿ, ಬರಿಗಾಲಲ್ಲಿ ನಡೆದು ಬಂದು ದರ್ಶನ ಪಡೆಯುತ್ತಾರೆ. ಅಧಿಕ ಸಂಖ್ಯೆಯಲ್ಲಿ ಭಕ್ತರು ಇಲ್ಲಿ ಸೇರುವುದರಿಂದ ತಮ್ಮ ನೇತೃತ್ವದಲ್ಲಿ ಭಕ್ತಾದಿಗಳಿಗೆ ಸಕಲ ಸೌಲಭ್ಯಗಳನ್ನು ಕೈಗೊಳ್ಳಲಾಗುತ್ತದೆ. ಕಾರ್ಯಕ್ರಮದ ಸಾನಿಧ್ಯವನ್ನು ಬಂಜಾರರ ಜಗದ್ಗುರು ಶ್ರೀ ರಾಮರಾವ್ ಮಹಾರಾಜ್ ಅವರು ವಹಿಸುವರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ರಾಜ್ಯ ಬಿಜೆಪಿ ಅಧ್ಯಕ್ಷ ಕೆ. ಎಸ್. ಈಶ್ವರಪ್ಪ, ಸಚಿವ ಎಸ್.ಎ. ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರ, ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತಿತರರು ಆಗಮಿಸುವರು.

ಕಾರ್ಯಕ್ರಮದ ಅಂಗವಾಗಿ ಎರಡು ದಿನಗಳ ಕಾಲ ನಾಟಕ, ಭಜನೆ, ಗಾಯನ, ನೃತ್ಯ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು, ಕುಸ್ತಿ ಪಂದ್ಯಗಳು ನಡೆಯಲಿವೆ. ತಾಂಡಾ ಅಭಿವೃದ್ಧಿ ನಿಗಮ, ಶ್ರೀ ಸೇವಾಲಾಲ್ ಜನ್ಮ ಸ್ಥಳ ಜೀರ್ಣೋದ್ಧಾರ ಸಮಿತಿ, ಶ್ರೀ ಸೇವಾಲಾಲ್ ಚಾರಿಟಬಲ್ ಟ್ರಸ್ಟ್, ಶ್ರೀ ಸೇವಾಲಾಲ್ ಮರಿಯಮ್ಮ ಸೇವಾ ಸಮಿತಿ ಇವರ ಸಹಯೋಗದಲ್ಲಿ ಕಾರ್ಯಕ್ರಮಗಳು ಜರುಗಲಿವೆ.

ಸೂರಗೊಂಡನಕೊಪ್ಪದಲ್ಲಿ ಸೇವಾಲಾಲ್ ದೇವಸ್ಥಾನಕ್ಕೆ 1 ಕೋಟಿ ರೂ., ವಿವಿಧ ಕಾಮಗಾರಿಗಳಿಗೆ 50 ಲಕ್ಷ ರೂ.ಗಳನ್ನು ಸರ್ಕಾರ ನೀಡಿದೆ. ಈಗ ಸಮುದಾಯ ಭವನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆಗೆ 1 ಕೋಟಿ 40 ಲಕ್ಷ ರೂ. ಬಿಡುಗಡೆಯಾಗಿದ್ದು, ಕಾಮಗಾರಿಗಳು ಶೀಘ್ರದಲ್ಲಿಯೇ ಆರಂಭವಾಗಲಿವೆ ಎಂದರು.

ಇದುವರೆಗೆ ರಾಜ್ಯದಲ್ಲಿ ತಾಂಡಾಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ 2009-10 ನೇ ಸಾಲಿನಲ್ಲಿ 22 ಕೋಟಿ ರೂ., 2010-11 ರಲ್ಲಿ 40 ಕೋಟಿ ರೂ. ಮತ್ತು 2011-12 ರಲ್ಲಿ 58 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಮುಂದಿನ ವರ್ಷದಲ್ಲಿ 217 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಆರ್. ಮಲ್ಲೇಶ್ ನಾಯ್ಕ, ಲಿಂಬ್ಯಾ ನಾಯ್ಕ ಮತ್ತಿತರರಿದ್ದರು.

## ನಗರದಲ್ಲಿ ಇಂದು ಗ್ರಾಮ ಪಂಚಾಯ್ತಿ ಜನ ಪ್ರತಿನಿಧಿಗಳ ಸಮಾವೇಶ

ದಾವಣಗೆರೆ, ಫೆ.13- ಕರ್ನಾಟಕ ರಾಜ್ಯ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 14ರ ಮಂಗಳವಾರ ಮಧ್ಯಾಹ್ನ 3ಕ್ಕೆ ನಗರದ ಗುರುಭವನದಲ್ಲಿ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಜಿಲ್ಲಾ ಮಟ್ಟದ ಸಮಾವೇಶ ಆಯೋಜಿಸಲಾಗಿದೆ ಎಂದು ಜಿಲ್ಲಾ ಸಂಚಾಲಕ, ಆನೇಕಲ್ ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಂ.ಮಹೇಶ್ವರಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಾವು ಚುನಾಯಿತ ಪ್ರತಿನಿಧಿಗಳಾಗಿ ಎರಡು ವರ್ಷ ಕಳೆಯುತ್ತಿದೆ. ನಮಗೆ ಆಡಳಿತದಲ್ಲಿ ಸ್ವತಂತ್ರ ಅಧಿಕಾರ ಸಿಕ್ಕಿಲ್ಲ. ಎಲ್ಲಾ ಅಧಿಕಾರ ಮೇಲ್ಪಟ್ಟ ಅಧಿಕಾರಿಗಳು, ಶಾಸಕರು, ಸಂಸತ್ ಸದಸ್ಯರಿಗೆ ಇದೆ. ಪಂಚಾಯ್ತಿಗಳಿಗೆ ಅಧಿಕಾರ ನೀಡಲಾಗಿದೆ ಎಂಬುದು ಕಾಗದದಲ್ಲಿ ಮಾತ್ರವೇ ಉಳಿದಿದೆ. ಶಾಸನ ಬದ್ಧ ಅನುದಾನ ರೂ. 8 ಲಕ್ಷದಲ್ಲಿ ರೂ.4.80 ಲಕ್ಷ ವಿದ್ಯುತ್ ಬಿಲ್‌ಗೆ ಕಡಿತ ಆಗುತ್ತದೆ ಎಂದು ಹೇಳಿದರು.

ಪ್ರತಿ ಪಂಚಾಯ್ತಿಗೆ ಒಂದು ಕೋಟಿ ರೂಪಾಯಿ ಅನುದಾನ ನೀಡಬೇಕು. ವಿದ್ಯುತ್ ಬಿಲ್ ಸಂಪೂರ್ಣ ಮನ್ನಾ ಮಾಡಬೇಕು. ಅಧ್ಯಕ್ಷರಿಗೆ ರೂ.5 ಸಾವಿರ, ಉಪಾಧ್ಯಕ್ಷರಿಗೆ ರೂ.3 ಸಾವಿರ, ಸದಸ್ಯರಿಗೆ ರೂ.2 ಸಾವಿರ ವೇತನದ ಜೊತೆಗೆ ಶಾಸಕರಿಗೆ ನೀಡುವಂತೆ ಪಿಂಚಣಿ ಯೋಜನೆ, ದಿನ ಭತ್ಯೆ, ಸಾರಿಗೆ ಭತ್ಯೆ ಕೊಡಬೇಕು. ಈ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಗುವುದು ಎಂದು ಹೇಳಿದರು.

ಆನೇಕಲ್ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ವೀರಸ್ವಾಮಿ, ವಕೀಲ ಓಬಳೇಶ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಬ್ಲೂ ಫಿಲ್ಮ್ ಸಚಿವರ ವಿರುದ್ಧ ತನಿಖೆಗೆ ಆದೇಶ

(1ನೇ ಪುಟದಿಂದ)

ಲಕ್ಷ್ಮಣ ಸವದಿ ಹಾಗೂ ಸಿ.ಸಿ.ಪಾಟೀಲ್ ಅವರು ಕಾನೂನು ಪ್ರಕಾರ ನಿಷಿದ್ಧವಾಗಿರುವ ಚಟುವಟಿಕೆ, ಅನೈತಿಕ ಚಟುವಟಿಕೆಗಳೆಂದು ಹೇಳಲಾಗುವ ಬ್ಲೂ ಫಿಲ್ಮ್ ವೀಕ್ಷಿಸುವ ಮೂಲಕ ಪವಿತ್ರ ಸ್ಥಳವನ್ನು ಅಪವಿತ್ರ ಮಾಡಿದ್ದಾರೆ.

ಮೂರನೇ ಆರೋಪಿ ಕೃಷ್ಣ ಪಾಲೇಮಾರ್ ಅವರು ತಮ್ಮ ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಇಟ್ಟುಕೊಂಡು ಅದನ್ನು ಈ ಇಬ್ಬರು ಆರೋಪಿಗಳಿಗೆ ರವಾನಿಸಿ ಪ್ರಚೋದಿಸಿರುತ್ತಾರೆ. ಹೀಗೆ ಮಾಡುವ ಮೂಲಕ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂಬ ವಿಚಾರ ಮಾಧ್ಯಮಗಳಿಂದ ಸಾಕ್ಷ್ಯಾಧಾರಗಳ ಸಮೇತ ಬಿತ್ತರಗೊಂಡಿದೆ.

ಇದು ನಾಡಿನ ಪ್ರಜೆಗಳ ಗೌರವಕ್ಕೆ, ಸಂಸ್ಕೃತಿಯ ಹಿರಿಮೆಗೆ, ಉಳಿದ ಶಾಸಕರು, ಸಭಾಧ್ಯಕ್ಷರ ನೆಮ್ಮದಿಗೆ ಭಂಗ ತಂದಿರುತ್ತದೆ. ಹೊಟ್ಟೆ ಪಾಡಿಗಾಗಿ ಬಾರ್, ಕ್ಲಬ್‌ಗಳಲ್ಲಿ ಅರೆಬೆತ್ತಲೆಯಾಗಿ ನೃತ್ಯ ಮಾಡುವ ಹೆಣ್ಣು ಮಕ್ಕಳ ವಿರುದ್ಧ, ಅದನ್ನು ವೀಕ್ಷಿಸುವ ಗಿರಾಕಿಗಳ ವಿರುದ್ಧ ಸ್ವಯಂಪ್ರೇರಿತರಾಗಿ ಕ್ರಿಮಿನಲ್ ಮೊಕದ್ದಮೆ ಹೂಡುವ, ಎಫ್‌ಐಆರ್ ಸಲ್ಲಿಸಿ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡುವ ಪೊಲೀಸರು, ಈ ಪ್ರಕರಣದಲ್ಲಿ ಮೂವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಹಾಸ್ಯಾಸ್ಪದ ಎಂದಿದ್ದಾರೆ.

## ನಗರದಲ್ಲಿ ಇಂದು ಜೆಡಿಎಸ್ ಬೈಕ್ ರ‍್ಯಾಲಿ

ಜೆಡಿಎಸ್ ಉತ್ತರ ವಿಧಾನಸಭಾ ಕ್ಷೇತ್ರದ ವತಿಯಿಂದ ಇಂದು ಮಧ್ಯಾಹ್ನ 12 ರಿಂದ ಸಂಜೆ 5ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಿಂದ ಹೊರಡುವ ಮೋಟಾರ್ ಬೈಕ್ ರ‍್ಯಾಲಿಯು ರಾಜಬೀದಿಗಳಲ್ಲಿ ಸಂಚರಿಸಿ, ಹಳೇಕುಂದವಾಡ, ದೊಡ್ಡಬಾತಿ, ಹೊಸಬಾತಿ, ಕಕ್ಕರಗೊಳ್ಳ, ದೇವರಹಟ್ಟಿ, ಅರಸಾಪುರ, ದೊಡ್ಡ ಓಬಜ್ಜಿಹಳ್ಳಿ, ಮಾಗಾನಹಳ್ಳಿ, ಪುಟಗನಾಳ್, ಕಾಡಜ್ಜಿ, ಎಲೆಬೇತೂರು ಮಾರ್ಗವಾಗಿ ಪುನಃ ಜಯದೇವ ವೃತ್ತ ತಲುಪಲಿದೆ ಎಂದು ಅಧ್ಯಕ್ಷ ಎಸ್.ಸಂಗೇಗೌಡ ತಿಳಿಸಿದ್ದಾರೆ.

# ಸುಗಮ ಸಂಗೀತಗಾರರು ಕಾವ್ಯದ ರಾಯಭಾರಿಗಳು

### ಗೀತೋತ್ಸವ ಸಮಾರೋಪದಲ್ಲಿ ಕವಿ ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಅಭಿಮತ

ದಾವಣಗೆರೆ, ಫೆ. 13 - ಪುಸ್ತಕದ ಕವಿತೆ ಅಷ್ಟಮಿ ಚಂದ್ರನಂತೆ ಅರ್ಧ ಚಂದ್ರ. ಸ್ವರ ಸಂಯೋಜನೆಗೊಂಡು ಉತ್ತಮ ಗಾಯಕರು ಹಾಡದರೆಂದರೆ, ಹುಣ್ಣಿಮೆಯ ಪೂರ್ಣ ಚಂದ್ರನಂತೆ ಪರಿಪೂರ್ಣ ಎನಿಸುವುದು. ಕವಿಗಳಿಗೆ ಸುಗಮ ಸಂಗೀತ 'ಗೆಳತಿ' ಎಂಬ ಅಭಿಪ್ರಾಯವನ್ನು ಖ್ಯಾತ ಕವಿ ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ವ್ಯಕ್ತಪಡಿಸಿದರು.



ಅವರು ನಗರದ ಬಾಪೂಜಿ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಗೀತೋತ್ಸವ - 2012 ರ 9ನೇ ಸುಗಮ ಸಂಗೀತ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಈ ರೀತಿ ಅಭಿಪ್ರಾಯ ಪಟ್ಟರು.

ಕವಿತೆಗೆ ಗಾಯನದ ಸ್ನೇಹ ಬೇಕೆ ಬೇಕು. ಬರಿಯ ಕವಿತೆ ಕನ್ನಿಕೆ. ಗಾಯನ ಸೇರಿದ ಕವಿತೆ ಗೃಹಿಣಿಯಂತೆ. ಕವಿತೆಗೆ ಶಕ್ತಿ ಇದೆ. ಆದರೆ, ಗಾಯನವೆಂಬ ಗೆಳತಿ ಜೊತೆ ಸೇರಿದಾಗಲೇ ಕೇಳುಗರಿಗೆ ರಸಾವೇಷ ಸೃಷ್ಟಿಯಾಗುತ್ತದೆ. ಸುಗಮ ಸಂಗೀತಗಾರರು ಕಾವ್ಯದ ರಾಯಭಾರಿಗಳಿದ್ದಂತೆ ಎಂದರು.

**ಪರಂಪರೆಯ ಬಗ್ಗೆ ಗೌರವ ಇರಬೇಕು**

ಸಂಗೀತ ಕಲಾವಿದರು ತಮ್ಮದೇ ಲೋಕದ ಮೂಲಕ ಪ್ರತಿ ಲೋಕ ಸೃಷ್ಠಿಸಿ ಅಮರರಾಗಿದ್ದಾರೆ. ನಮಗೂ ಮೊದಲು ಕಲಾ ಸೇವೆ ಸಲ್ಲಿಸಿರುವ ಅನೇಕ ಹಿರಿಯ ಕಲಾವಿದರು ಹಾಗೂ ಸಂಗೀತ ಪರಂಪರೆಯ ಬಗ್ಗೆ ಗೌರವವಿರಬೇಕು. ಮೈಸೂರು ಅನಂತ ಸ್ವಾಮಿ, ಸಿ.ಅಶ್ವತ್ಥ್, ಹೆಚ್.ಕೆ. ನಾರಾಯಣ ಮುಂತಾದ ಮಹನೀಯರನ್ನು ಸ್ಮರಿಸುವ ಅಗತ್ಯವಿದೆ. ಪರಂಪರೆಯ ಬಗ್ಗೆ ಗೌರವ ಇರುವವರು ಮಾತ್ರವೇ ಮುಂದೆ ಬರಲು ಸಾಧ್ಯ. ಜೊತೆಯಲ್ಲಿ ಸೌಜನ್ಯ ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕವಿಗಳ ನಡುವೆ ಸಿಗದ ಕೆಲ ಅನುಭವಗಳನ್ನು ಸುಗಮ ಸಂಗೀತಗಾರರ ನಡುವೆ ನಾನು ಪಡೆದಿದ್ದೇನೆ. ಸುಗಮ ಸಂಗೀತವನ್ನು ಕಳಪೆಯಾಗಲು ಬಿಡಬೇಡಿ. ಈ ಕ್ಷೇತ್ರಕ್ಕೆ ಎಲ್ಲಾ ರೀತಿಯವರು ಬರುತ್ತಾರೆ. ಆದರೆ, ಸಮರ್ಥರನ್ನು ಸೇರ್ಪಡೆಗೊಳಿಸಿ, ಸುಗಮ ಸಂಗೀತದ ಶ್ರೇಷ್ಠತೆಯನ್ನು ಕಾಪಾಡಿ ಎಂದು ಸಲಹೆ ನೀಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ॥ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಮನುಷ್ಯನ ಬದುಕಿನ ಶ್ರೀಮಂತಿಕೆಗೆ ಹಾಗೂ ಭಾವನೆಗಳ ಕೆದಕುವಿಕೆಗೆ ಸಂಗೀತ ಅತ್ಯಗತ್ಯ. ಜಗತ್ತಿನ ಕಟ್ಟ ಕಡೆಯ ಮನುಷ್ಯನನ್ನೂ ತಲುಪುವ ಒಂದೇ ಒಂದು ಸಾಧನವೆಂದರೆ, ಅದು ಸಂಗೀತ. ಪ್ರಮುಖವಾಗಿ ಜನಪದ, ಸುಗಮ ಸಂಗೀತ ಎಂದು ಅಭಿಪ್ರಾಯ ಪಟ್ಟರು.

ಪ್ರಾಧಿಕಾರದ ಅಧ್ಯಕ್ಷನಾಗಿ ಎಲ್ಲಾ ಹಂತಗಳಲ್ಲೂ ಕನ್ನಡೀಕರಣವಾಗಬೇಕೆಂದು ಹೋರಾಟ ನಡೆಸುತ್ತಿದ್ದರೂ, ಅದಿನ್ನೂ ಕೈಗೂಡಿಲ್ಲ. ಸಂಗೀತದ ಮೂಲಕ ಕನ್ನಡ ಡಿಂಡಿಮವನ್ನು ಭಾರಿಸುತ್ತಿರುವ ನೀವೆಲ್ಲರಿಗೂ ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಮಾತನಾಡಿ, ಬೆಂಗಳೂರಿನಲ್ಲಿ ಸುಗಮ ಸಂಗೀತ ಪರಿಷತ್‌ನ ಕಾರ್ಯಾಲಯಕ್ಕೆ ನಿವೇಶನ ನೀಡಬೇಕು. ಪರಿಷತ್ ನಡೆಸುವ ಸಮ್ಮೇಳನಕ್ಕೆ ಶಾಶ್ವತ ಅನುದಾನ ನೀಡಬೇಕು. ನಾಡ ಗೀತೆಗೆ ನಿರ್ದಿಷ್ಟ ಧಾಟಿಯನ್ನು ಅಧಿಕೃತಗೊಳಿಸಬೇಕೆಂದು ಸಭೆಯು ಮೂರು ನಿರ್ಣಯಗಳನ್ನು ಮಂಡಿಸಿ, ಬೇಡಿಕೆ ಈಡೇರಿಸಿ ಕೊಡುವಂತೆ ಮುಖ್ಯಮಂತ್ರಿ ಚಂದ್ರುರವರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಚಂದ್ರು, ಅನುದಾನದ ವಿಚಾರವಾಗಿ ಮಂತ್ರಿಗಳ ಬಳಿ ಚರ್ಚಿಸುತ್ತೇನೆ.ಪೂರಕ ಆಯವ್ಯಯದ ವೇಳೆ ಪ್ರಯತ್ನಿಸುವುದಾಗಿ ತಿಳಿಸಿದರು.

ರಾಷ್ಟ್ರಗೀತೆ ಹಾಡುವ ಸಮಯದಷ್ಟೇ ಸಮಯದೊಳಗೆ ನಾಡಗೀತೆಯನ್ನು ಹಾಡುವ ಕುರಿತು ಯೋಚಿಸಲಾಗುತ್ತಿದ್ದು, 6 ತಿಂಗಳೊಳಗೆ ಈ ಕಾರ್ಯವನ್ನು ಮಾಡಿಸುವುದಾಗಿ ತಿಳಿಸಿದರು. ನಾಡಗೀತೆಯ ಸಾಲುಗಳನ್ನು ಕಡಿಮೆ ಮಾಡಿದ್ದಲ್ಲಿ ಸಾಹಿತ್ಯ ಲೋಕದಿಂದ ತಕರಾರು ಬರಬಹುದು ಅಂತಹ ಸಂದರ್ಭ ಎದುರಾದಲ್ಲಿ ಸಮಿತಿಯೊಂದನ್ನು ರಚಿಸೋಣ ಎಂದ ಅವರು, ಈ ಹಕ್ಕೊತ್ತಾಯಗಳ ಬಗ್ಗೆ ಲಿಖಿತ ಮನವಿ ನೀಡುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಗಾಯಕರಾದ ಟಿ.ವಿ. ರಾಜು, ಗಾಯಕಿ ಬಿ.ಕೆ.ಸುಮಿತ್ರ, ಕಿಕ್ಕೇರಿ ಕೃಷ್ಣಮೂರ್ತಿಯವರನ್ನು ಗೌರವಿಸಲಾಯಿತು. ದಾವಣಗೆರೆ ಜಿಲ್ಲಾಡಳಿತ ಹಾಗೂ ಪರಿಷತ್‌ನ ಜಿಲ್ಲಾ ಘಟಕದ ಪರವಾಗಿ ಸಾಲಿಗ್ರಾಮ ಗಣೇಶ್ ಶೆಣೈ ದಂಪತಿಗಳಿಗೆ ಗೌರವಿಸಿದರು.

ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷೆ ಡಾ॥ ಶ್ಯಾಮಲಾ ಜಿ. ಭಾವೆ, ವಿಧಾನ ಪರಿಷತ್ ಮುಖ್ಯ ಸಚೇತಕ ಡಾ॥ ಎ.ಹೆಚ್.ಶಿವಯೋಗಿಸ್ವಾಮಿ, ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಕಿಕ್ಕೇರಿ ಕೃಷ್ಣಮೂರ್ತಿ, ಖಜಾಂಚಿ ಶ್ರೀನಿವಾಸ ಉಡುಪ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಎನ್.ಅಪರ್ಣ ಮತ್ತು ಮಾಲತಿ ಶರ್ಮಾ ನಿರೂಪಿಸಿದರು.

**ಸಮ್ಮೇಳನದ ನಿರ್ಣಯಗಳು**

- ಬೆಂಗಳೂರಿನ ಕರ್ನಾಟಕ ಸುಗಮ ಸಂಗೀತ ಪರಿಷತ್‌ಗೆ ನಿವೇಶನದ ಬೇಡಿಕೆ
- ಪರಿಷತ್‌ನ ಚಟುವಟಿಕೆಗೆ ಶಾಶ್ವತ ಅನುದಾನ ನೀಡಬೇಕು.
- ನಾಡಗೀತೆಗೆ ನಿರ್ದಿಷ್ಟ ಧಾಟಿಯನ್ನು ಅಧಿಕೃತಗೊಳಿಸಬೇಕು.

## ತುಂಗಭದ್ರಾ ನದಿಯಲ್ಲಿ ಮುಳುಗಿ ಮಹಿಳೆಯ ಸಾವು

ಹೂವಿನಹಡಗಲಿ, ಫೆ. 13 - ತಾಲ್ಲೂಕಿನ ಹಿರೇಬನ್ನಿಮಟ್ಟಿ - ಬ್ಯಾಲಹುಣ್ಸೆ ಮಧ್ಯೆ ತುಂಗಭದ್ರಾ ನದಿ ದಾಟುವ ದೋಣಿಗಾಗಿ ಕಾಯುತ್ತಿದ್ದ ಹಿರೇಬನ್ನಿಮಟ್ಟಿ ಗ್ರಾಮದ ಶಕಿನಾಬೀ (65) ಎಂಬ ಮಹಿಳೆ ನೀರು ಕುಡಿಯಲು ಹೋದಾಗ, ಕಾಲು ಜಾರಿ ತುಂಗಭದ್ರಾ ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾಳೆ.

ಭಾನುವಾರ ಮಾಗಳ ಗ್ರಾಮಕ್ಕೆ ಮಗಳನ್ನು ಮಾತನಾಡಿಸಲು ಬಂದ ಶಕಿನಾಬೀ ಹೊಳೆ ದಾಟಿ ಬಾಳೆ ಹೊಸೂರಿಗೆ ತೆರಳಲು ದೋಣಿಗಾಗಿ ಕಾಯುತ್ತಿದ್ದರು. ಇದೇ ಸಂದರ್ಭದಲ್ಲಿ ನೀರು ಕುಡಿಯಲು ಹೋಗಿ ನದಿಯಲ್ಲಿ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ ಎನ್ನಲಾಗಿದೆ.

## ಹೊನ್ನಾಳಿಯಲ್ಲಿ ಇಂದಿನಿಂದ ದೈಹಿಕ ಶಿಕ್ಷಕರ ಕಾರ್ಯಾಗಾರ

ದಾವಣಗೆರೆ ಉಪನಿರ್ದೇಶಕರ ಕಾರ್ಯಾಲಯ, ಹೊನ್ನಾಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಮತ್ತು ಹೊನ್ನಾಳಿ ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸಂಯುಕ್ತಾಶ್ರಯದಲ್ಲಿ ಇಂದಿನಿಂದ 2 ದಿನಗಳ ಕಾಲ ಹಿರೇಕಲ್ಮಠದ ಶ್ರೀ ಚನ್ನಪ್ಪ ಸ್ವಾಮಿ ಸಮುದಾಯ ಭವನದಲ್ಲಿ ಜಿಲ್ಲಾ ಮಟ್ಟದ ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಸಂಬಂಧಿಸಿದ ಶಿಕ್ಷಕರು ಕಾರ್ಯಾಗಾರದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ಪರಿಗಣಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಆದೇಶಿಸಿದ್ದಾರೆ ಎಂದು ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಭೈರಪ್ಪ ತಿಳಿಸಿದ್ದಾರೆ.

## ರೈಲಿಗೆ ಸಿಕ್ಕು ಯುವಕನ ಸಾವು

ದಾವಣಗೆರೆ,ಫೆ.13- ಹರಿಹರ-ಕುಮಾರಪಟ್ಟಣಂ ಮಧ್ಯೆ ಇಂದು ಚಲಿಸುತ್ತಿದ್ದ ರೈಲಿಗೆ ಸಿಕ್ಕು ಸುಮಾರು 35 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾನೆ. ಕೋಲುಮುಖ, ಸಾಧಾಗೆಂಪು ಮೈಬಣ್ಣ, ತೆಳ್ಳನೆಯ ಶರೀರ ಚಹರೆ ಹೊಂದಿರುವ ಈತ, ಬಿಳಿ ಕಪ್ಪು ಡಿಸೈನ್ ಇರುವ ತುಂಬು ತೋಳಿನ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಸಂಪರ್ಕಿಸಬಹುದು.

# ನಗರದಲ್ಲಿ ಇಂದು ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ

ದಾವಣಗೆರೆ, ಫೆ.13- ಕೊಟ್ಟೂರು ಶ್ರೀ ಗುರು ಬಸವ ರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ನಾಳೆ ದಿನಾಂಕ 14ರ ಮಂಗಳವಾರ ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ 33ನೇ ವರ್ಷದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ನಗರದ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಿಂದ ಪಾದಯಾತ್ರೆ ಹೊರಡಲಿದೆ. ಇದೇ ದಿನಾಂಕ 17 ರಂದು ಕೊಟ್ಟೂರಿನಲ್ಲಿ ರಥೋತ್ಸವ ನಡೆಯಲಿದೆ ಎಂದು ಟ್ರಸ್ಟ್ ಉಪಾಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ ನಿನ್ನೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

14ರ ಮಂಗಳವಾರ ಸಂಜೆ 5 ಗಂಟೆಗೆ ದೂರದರ್ಶನ ಮತ್ತು ಆಕಾಶವಾಣಿ ಕಲಾವಿದ ಪಿ. ಸುಧಾಕರ್ ಅವರಿಂದ ವಚನ ಸಂಗೀತ ಕಾರ್ಯಕ್ರಮ ಏರ್ಪಾಡಾಗಿದೆ. ನಂತರ ಸಂಜೆ 6 ಗಂಟೆಗೆ ನಡೆಯುವ ಪಾದಯಾತ್ರಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಕೂಡ್ಲಿಗಿ ತಾಲ್ಲೂಕಿನ ಅಯ್ಯನಹಳ್ಳಿಯ ಶ್ರೀ ಮಾಹೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸುವರು.

ಟ್ರಸ್ಟ್ ಗೌರವಾಧ್ಯಕ್ಷ ಅಥಣಿ ಎಸ್.ವೀರಣ್ಣ ಅಧ್ಯಕ್ಷತೆಯಲ್ಲಿ ಶಾಸಕ ಡಾ. ಶಾಮನೂರು ಶಿವ ಶಂಕರಪ್ಪ, ಯಜಮಾನ್ ಟಿ.ಜಯದೇವಪ್ಪ, ಶಾಮನೂರು ಬಕ್ಕಪ್ಪ ಅವರುಗಳು ಜ್ಯೋತಿ ಬೆಳಗಿಸುವರು.

ಸಂಸದ ಜಿ.ಎಂ.ಸಿದ್ದೇಶ್ವರ, ಸಚಿವ ಎಸ್.ಎ.ರವೀಂದ್ರನಾಥ್, ಶಾಸಕರುಗಳಾದ ಎಸ್. ವಿ.ರಾಮಚಂದ್ರ, ಡಾ॥ ಎ.ಹೆಚ್.ಶಿವಯೋಗಿಸ್ವಾಮಿ, ಬಿ.ಪಿ.ಹರೀಶ್, ಮಹಾಪೌರ ಹೆಚ್.ಎನ್. ಗುರುನಾಥ್, ಎಂ.ಜಿ. ಬಕ್ಕೇಶ್, ಸೈಯದ್ ಸೈಫುಲ್ಲಾ, ಅಂಬರ್‌ಕರ್ ರಮೇಶ್, ಡಾ. ಬಿ.ಎಂ. ವಿಶ್ವನಾಥ್, ಡಾ. ಎ.ಎಂ. ಶಿವಕುಮಾರ್, ಜಿ.ಎಂ. ವೀರಯ್ಯ, ಎಂ. ಹಾಲಪ್ಪ, ಹೆಚ್.ಎಂ. ರುದ್ರಮುನಿಸ್ವಾಮಿ, ದಿನೇಶ್ ಕೆ. ಶೆಟ್ಟಿ, ಕೆ.ಸಿ. ಅಂದನೂರು, ಬಿ. ಕರಿಬಸಪ್ಪ, ಟಿ. ಅಂಜಿಬಾಬು, ಕೆ.ಪಿ. ರಾಜಣ್ಣ, ಬಿ.ಕೆ. ಪರಶುರಾಮ್, ಶ್ರೀಮತಿ ಶಾಮನೂರು ಗೀತಾ ಮುರುಗೇಶ್ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪ್ರಸಕ್ತ ವರ್ಷ ಸುಮಾರು 30 ಸಾವಿರ ಮಂದಿ ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. 14 ರಂದು ಸಂಜೆ 6ಕ್ಕೆ ವಿಶೇಷ ಪೂಜೆ ಬಳಿಕ ಪಾದಯಾತ್ರೆ ಆರಂಭವಾಗಲಿದೆ. ದಾರಿಯುದ್ದಕ್ಕೂ ಭಕ್ತರ ನೆರವಿನಿಂದ ಎಲ್ಲಾ ಪಾದಯಾತ್ರಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಪಾದಯಾತ್ರೆ ಕುರಿತಂತೆ ಹೆಚ್ಚಿನ ಮಾಹಿತಿಗೆ ಮೊಬೈಲ್: 96118-89151, 98448-50373 ಸಂಪರ್ಕಿಸಬಹುದು.

ಪಾದಯಾತ್ರಿಗಳಿಗಾಗಿ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ನಿರ್ಮಾಣ ಹಂತದಲ್ಲಿರುವ ಶ್ರೀ ಗುರುಬಸವ ರಾಜೇಂದ್ರಸ್ವಾಮಿ ಸಮುದಾಯ ಭವನಕ್ಕೆ ಭಕ್ತರು ನೆರವಾಗಬೇಕು ಎಂದು ಕಣಕುಪ್ಪಿ ಮುರುಗೇಶಪ್ಪ ಅವರು ಮನವಿ ಮಾಡಿದರು.

ಟ್ರಸ್ಟ್ ಅಧ್ಯಕ್ಷ ಶಾಮನೂರು ಬಕ್ಕಪ್ಪ, ಪದಾಧಿಕಾರಿಗಳಾದ ಬಿ.ಚಿದಾನಂದ, ಸಿ.ಆರ್. ಜಯರಾಜ್ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದರು.

**ಬಿಸ್ಕತ್ ವಿತರಣೆ :** 5 ಸಾವಿರ ಪಾದಯಾತ್ರಿಗಳಿಗೆ ಹಾಸಭಾವಿ ವೃತ್ತದ ಗೆಳೆಯರ ಬಳಗ ಮತ್ತು ದಾಸಪ್ಪ ಮೆಡಿಕಲ್ಸ್ ವತಿಯಿಂದ ಬಿಸ್ಕತ್ತುಗಳನ್ನು ವಿತರಿಸಲಾಗುವುದು ಎಂದು ದಾಸಪ್ಪ ಸುನಿಲ್ ಕುಮಾರ್ ತಿಳಿಸಿದ್ದಾರೆ.

## ನಗರದಿಂದ ಆವರಗೊಳ್ಳಕ್ಕೆ ಇಂದು ಗುಗ್ಗಳ

ಶ್ರೀ ವೀರಭದ್ರೇಶ್ವರ ಶರಭೀ ಗುಗ್ಗಳವು ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಿಂದ ಆವರಗೊಳ್ಳದ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಪಾದಯಾತ್ರೆ ಮೂಲಕ ಇಂದು ಬೆಳಗಿನಜಾವ ಹೊರಡಲಿದೆ. ಇಂದು ರಾತ್ರಿ 8 ಕ್ಕೆ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪ್ರಸಾದ ವಿನಿಯೋಗ ನಡೆಯಲಿದೆ.

❑ **ನವದೆಹಲಿ :** ಭಾರತೀಯರ 500 ಶತಕೋಟಿ ಡಾಲರ್ (ಸುಮಾರು 24.5 ಲಕ್ಷ ಕೋಟಿ ರೂ.) ಅಕ್ರಮ ಹಣ ವಿದೇಶಿ ತೆರಿಗೆ ಕಳ್ಳತನ ತಾಣಗಳಲ್ಲಿ ಕೊಳೆ ಯುತ್ತಿದೆ ಎಂದು ಸಿಬಿಐ ನಿರ್ದೇಶಕ ಎ.ಪಿ.ಸಿಂಗ್ ಬಹಿರಂಗ ಪಡಿಸಿದ್ದಾರೆ.

## ಸೂರಗೊಂಡನಕೊಪ್ಪದಲ್ಲಿ ಸೇವಾಲಾಲ್ ಜಯಂತಿಗೆ ಸಿದ್ಧತೆ ಪೂರ್ಣ



ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಇಂದು ಮತ್ತು ನಾಳೆ ನಡೆಯಲಿರುವ ಸಂತ ಸೇವಾಲಾಲ್ ಜಯಂತಿಯ ಪೂರ್ವ ಸಿದ್ಧತೆಯನ್ನು ಅಬಕಾರಿ ಸಚಿವ ರೇಣುಕಾಚಾರ್ಯ ಅವರು ನಿನ್ನೆ ಪರಿಶೀಲಿಸಿದರು. ಸಚಿವರ ಜೊತೆ ತಹಶೀಲ್ದಾರ್ ಶೈಲಜಾ ಪ್ರಿಯದರ್ಶಿನಿ, ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಸಿ. ಮಲ್ಲಿಕಾರ್ಜುನ್, ಬೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ಲಕ್ಷ್ಮಪ್ಪ, ಮುಖಂಡರಾದ ಶಿವರಾಂ ನಾಯ್ಕ್, ಜುಂಜಾ ನಾಯ್ಕ, ಭೀಮಸೇನಾನಾಯ್ಕ, ಶಿವಾಜಿ ನಾಯ್ಕ, ಗ್ರಾಮ ಪಂಚಾಯ್ತಿ ಸದಸ್ಯ ಮುರಿಗೇಂದ್ರನಾಯ್ಕ, ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಪೀರ್‍ಯಾನಾಯ್ಕ, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಮಾರುತಿ ನಾಯ್ಕ, ಭೂಪಾಲ ನಾಯ್ಕ, ರಾಮಾನಾಯ್ಕ, ಸೂರಿ ನಾಯ್ಕ, ಲೋಕೇಶ್ ಮತ್ತಿತರರಿದ್ದರು.


**ಭಕ್ತಿಪೂರ್ವಕ ಅಭಿನಂದನೆಗಳು**




ರಂಗಭೂಮಿಯ ಪುನಶ್ಚೇತನಕ್ಕೆ ಶ್ರಮಿಸುತ್ತಿರುವ ಮಹತ್ಸಾಧನೆ ಗುರುತಿಸಿ ಕುವೆಂಪು ವಿಶ್ವವಿದ್ಯಾನಿಲಯ ಕೊಡಮಾಡಿದ ಗೌರವ ಡಾಕ್ಟರೇಟ್‌ಗೆ ಭಾಜನರಾದ

**ಪರಮಪೂಜ್ಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ**

ಪ್ರಣಾಮಗಳನ್ನು ಸಲ್ಲಿಸುತ್ತಾ, ಅಭಿನಂದಿಸುತ್ತೇವೆ.

**ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು**
**ಶಿವಗೋಷ್ಠಿ ಸಮಿತಿ, ತರಳಬಾಳು ಬಡಾವಣೆ, ದಾವಣಗೆರೆ.**


**ಕೆ.ಟಿ.ಜೆ. ನಗರದ ಹೆಚ್. ಜಯಮ್ಮ ನಿಧನ**



ದಾವಣಗೆರೆ ಕೆಟಿಜೆ ನಗರ 12ನೇ ಕ್ರಾಸ್ ವಾಸಿ, ವೆಂಕಟೇಶ್ ಅವರ ಪತ್ನಿ ಶ್ರೀಮತಿ ಹೆಚ್. ಜಯಮ್ಮ (48) ಅವರು ದಿನಾಂಕ 14.02.2012ರ ಮಂಗಳವಾರ ಬೆಳಗಿನ ಜಾವ 12.30ಕ್ಕೆ ನಿಧನರಾದರು. ಪತಿ, ಮೂವರು ಪುತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.02.2012ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

**ಸವಿನೆನಪು**




ದಿ॥ ಕಂದನಕೋವಿ ಗೌರಮ್ಮ (ತಾಯಿ)
ನಿಧನ : 14.02.2010

*ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,*

**ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು. ಯಜಮಾನ್ ಕಂದನಕೋವಿ ಬೆಳ್ಳೂಡಿ ವಂಶಸ್ಥರು, ಮತ್ತು ಅಂದನೂರು ಕುಟುಂಬ ವರ್ಗದವರು ಮತ್ತು ಆತ್ಮೀಯ ಸ್ನೇಹಿತರು ಹಾಗೂ ಅಪಾರ ಬಂಧು-ಮಿತ್ರರು.**

**ಕಂಚಿಕೆರೆ ಸೋಮಶೇಖರಪ್ಪ ನಿಧನ**



ದಾವಣಗೆರೆ ಕಾಳಿಕಾದೇವಿ ರಸ್ತೆ, ಇಜಾರ್‌ದಾರ್ ಗಲ್ಲಿ ವಾಸಿ ಕಂಚಿಕೆರೆ ಸೋಮಶೇಖರಪ್ಪ (68) ಅವರು ದಿನಾಂಕ 13.02.2012ರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.02.2012ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ವಿವಿಧೆಡೆಯಲ್ಲಿ ಇಂದಿನ ಕಾರ್ಯಕ್ರಮಗಳು

### ದಾವಣಗೆರೆ

**ತರಬೇತಿ ಶಿಬಿರ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ (ಬೆಂಗಳೂರು), ಸಹಕಾರ ಇಲಾಖೆ (ದಾವಣಗೆರೆ), ಜಿಲ್ಲಾ ಸಹಕಾರ ಯೂನಿಯನ್ ನಿಯಮಿತದ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಮತ್ತು ಹರಿಹರ ತಾಲ್ಲೂಕಿನ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಒಂದು ದಿನದ ಜಿಲ್ಲಾ ವಿಶೇಷ ತರಬೇತಿ ಶಿಬಿರ. ಸಮಯ : ಬೆಳಿಗ್ಗೆ 10 ರಿಂದ 4.30ರವರೆಗೆ. ಸ್ಥಳ : ಪಶು ಭವನ ಸಭಾಂಗಣ (ಅರುಣ ಚಿತ್ರಮಂದಿರದ ಎದುರು). ಉದ್ಘಾಟನೆ : ಎನ್‌ಎಂಜೆಬಿ ಆರಾಧ್ಯ. ಅಧ್ಯಕ್ಷತೆ : ಗೋಪನಾಳ್ ಜಿ. ಕರಿಬಸಪ್ಪ. ಮುಖ್ಯ ಅತಿಥಿಗಳು : ಬಿ.ವಿ. ಚಂದ್ರಶೇಖರ್, ಎಸ್. ಹಾಲಪ್ಪ, ವಿ.ಕುಬೇರಪ್ಪ, ಎ.ಕೆ. ಚಿದಾನಂದ, ಹೆಚ್.ಕೆ. ಪಾಲಾಕ್ಷಪ್ಪ, ಜಗದೀಶಪ್ಪ ಬಣಕಾರ್, ಶ್ರೀಮತಿ ಜಯಮ್ಮ ಬಿ. ಕುಬೇರಪ್ಪ, ಎಂ.ಟಿ. ಮಂಜುನಾಥ್, ಎನ್.ಸುರೇಶ್, ಡಾ.ಎನ್. ಗುರುಶೇಖರನ್, ಎಸ್.ಸಿ. ಮಹಾರುದ್ರಪ್ಪ, ಹೆಚ್.ಬಿ. ಮಂಜುನಾಥ್.

**ವಿಶೇಷ ಮಕ್ಕಳ ಕ್ರೀಡಾಕೂಟ :** ಅಂಗವಿಕಲರ ಆಶಾಕಿರಣ ಟ್ರಸ್ಟ್ (ದಾವಣಗೆರೆ), ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಕಾಡೆಮಿ ಫಾರ್ ಮೆಂಟಲ್ ಚಾಲೆಂಜ್ಡ್ (ಬೆಂಗಳೂರು), ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ (ದಾವಣಗೆರೆ) ಇವರುಗಳ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಕಡಿಮೆ ಸಾಮರ್ಥ್ಯದ ವಿಶೇಷ ಮಕ್ಕಳ ಕ್ರೀಡಾಕೂಟ. ಸ್ಥಳ : ಜಿಲ್ಲಾ ಕ್ರೀಡಾಂಗಣ. ಸಮಯ : ಮಧ್ಯಾಹ್ನ 10.30ಕ್ಕೆ. ಅಧ್ಯಕ್ಷತೆ : ಡಾ.ಶಾಮನೂರು ಶಿವಶಂಕರಪ್ಪ. ಉದ್ಘಾಟನೆ : ಡಾ.ಎ.ಹೆಚ್. ಶಿವಯೋಗಿಸ್ವಾಮಿ. ಮುಖ್ಯ ಅತಿಥಿಗಳು : ಹೆಚ್.ಎನ್. ಗುರುನಾಥ್, ಎಸ್.ಹೆಚ್.ವಿಜಯಕುಮಾರ್, ಮೋತಿ ಪಿ. ರಾಮರಾವ್, ಪೋಪಟ್ ಲಾಲ್ ಜೈನ್, ಶಿವನಳ್ಳಿ ರಮೇಶ್, ದಿನೇಶ್ ಕೆ.ಶೆಟ್ಟಿ, ಡಾ.ಪರಶುರಾಮಪ್ಪ, ಕೆ.ಟಿ. ಗೋಪಾಲಗೌಡ್ರು, ವಾಸುದೇವ್, ರಾಕೇಶ್ ಮಲ್ಯ.

**ಬಗರ್ ಹುಕುಂ ಸಾಗುವಳಿದಾರರ ಸಮಾವೇಶ :** ಕರ್ನಾಟಕ ಪ್ರಾಂತ ರೈತ ಸಂಘ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಇವರ ಸಹಯೋಗದಲ್ಲಿ ಬಗರ್ ಹುಕುಂ ಸಾಗುವಳಿದಾರರ ತಾಲ್ಲೂಕು ಸಮಾವೇಶ. ಸಮಯ : ಬೆಳಿಗ್ಗೆ 10.30ಕ್ಕೆ. ಸ್ಥಳ : ಗುರುಭವನ. ಉದ್ಘಾಟನೆ : ಮಾರುತಿ ಮಾನ್ಪಡೆ. ಅಧ್ಯಕ್ಷತೆ : ಇ.ಶ್ರೀನಿವಾಸ. ಮುಖ್ಯ ಅತಿಥಿಗಳು : ಎಸ್.ಎಲ್. ಭರತ್ ರಾಜ್, ಕೆ.ಮಹಾಂತೇಶ್, ಕೆ.ಎಲ್. ಭಟ್, ಆರ್. ಓಬಳೇಶ್, ಶ್ರೀಮತಿ ರೇಣುಕಮ್ಮ.

**ಡಾಕ್ಟರೇಟ್ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ :** ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಸ್ಕೂಲ್ ಶಾಲಾ ವಾರ್ಷಿಕೋತ್ಸವ ಹಾಗೂ ವಿಜಾಪುರ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತರಾದ ಮಾಜಿ ಸಚಿವೆ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರಿಗೆ ಅಭಿನಂದನಾ ಸಮಾರಂಭ. ಸಮಯ : ಸಂಜೆ 4.30ಕ್ಕೆ. ಸ್ಥಳ : ಲಯನ್ಸ್ ಭವನ. ಮುಖ್ಯ ಅತಿಥಿಗಳು : ಡಾ. ಎ.ಹೆಚ್.ಶಿವಯೋಗಿಸ್ವಾಮಿ, ಬಿ.ಎ. ರಾಜಶೇಖರ್, ಡಿ.ಆರ್. ಅಮಿತ್, ಜಿ.ನಾಗನೂರು, ಡಾ.ಬಿ. ಎಸ್.ನಾಗಪ್ರಕಾಶ್, ಬಿ.ವಿ.ಶ್ರೀಧರಮೂರ್ತಿ. ಅಧ್ಯಕ್ಷತೆ : ವಾಸುದೇವ ರಾಯ್ಕರ್.

### ಕಮಲಾಪುರ (ಹರಿಹರ ತಾಲ್ಲೂಕು)

**ಎನ್ನೆಸ್ಸೆಸ್ ಶಿಬಿರದಲ್ಲಿ ಉಪನ್ಯಾಸ :** ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯ (ಮಲೇಬೆನ್ನೂರು) ಇವರ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಉಪನ್ಯಾಸ ಕಾರ್ಯಕ್ರಮ. ಬೆಳಿಗ್ಗೆ 7 ಗಂಟೆಗೆ ಧ್ವಜಾರೋಹಣ : ಕೆ.ಈಶ್ವರಪ್ಪ. ಉಪನ್ಯಾಸದ ಸಮಯ : ಸಂಜೆ 6 ಗಂಟೆಗೆ. ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣ. ಅಧ್ಯಕ್ಷತೆ : ಬಿ.ಸಣ್ಣನಿಂಗಪ್ಪ. ಉಪನ್ಯಾಸ : ಡಾ. ಬಿ.ಎಂ. ಪ್ರಭು, ಡಾ. ಅಪೂರ್ವ, ಡಾ.ನಿಸಾರ್ ಅಹ್ಮದ್, ಪಿ.ಹೆಚ್.ಪ್ರಕಾಶ್, ಟಿ.ಜಿ. ನಾಗರಾಜ್, ತಿಪ್ಪಣ್ಣ ಕಬ್ಬಾರ್, ಎಂ.ಎಂಸ್. ಷಣ್ಮುಖಪ್ಪ, ಪಿ. ಹೆಚ್. ಮೃತ್ಯುಂಜಯ ಅವರುಗಳಿಂದ ಉಪನ್ಯಾಸ. ಮುಖ್ಯ ಅತಿಥಿಗಳು: ಪಿ.ಬಸಪ್ಪ, ಪಿ.ರೇಣುಕಪ್ಪ, ಚಳ್ಳಕೆರೆ ಬಸಪ್ಪ, ಜಿ. ಸುರೇಶ್, ಜಿ.ಬಸವನಗೌಡ, ಬಿ.ಷಣ್ಮುಖಪ್ಪ, ಎಂ.ಸಿದ್ದಪ್ಪ, ದಡ್ಡಿ ಬಸವರಾಜಪ್ಪ, ಬಸಪ್ಪನವರ ಬಸವರಾಜಪ್ಪ, ಹಳೇಮನಿ ಮೌನೇಶ್ವರಪ್ಪ, ಮುದುಕಪ್ಪನವರ ನಿಂಗಪ್ಪ, ನಾಗಪ್ಪನವರ ಸಿದ್ದಪ್ಪ, ಕಣ್ಣಾಳ ಬಸಪ್ಪ, ಕ್ಯಾರಕಟ್ಟಿ ಕರಿಬಸಪ್ಪ, ಬಣಕಾರ ಮಹೇಶ್ವರಪ್ಪ, ಕೆ.ಪಂಚಾಕ್ಷರಿ.

### ಹುಚ್ಚವ್ವನಹಳ್ಳಿ (ಜಗಳೂರು ತಾಲ್ಲೂಕು)

**ಸಮಾರೋಪ :** ದಾವಣಗೆರೆ ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ, ಬಸವ ಭಾರತಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ. ಸಮಯ : ಬೆಳಿಗ್ಗೆ 11.30 ಕ್ಕೆ. ಉದ್ಘಾಟನೆ : ಎಸ್. ವಿ. ರಾಮಚಂದ್ರ. ಅಧ್ಯಕ್ಷತೆ : ಎಂ.ಬಸವರಾಜನಾಯ್ಕ. ಉಪಸ್ಥಿತಿ : ಪ್ರೊ. ಎಂ. ಶೇಖರಯ್ಯ. ಮುಖ್ಯ ಅತಿಥಿಗಳು : ಶ್ರೀಮತಿ ಸುಧಾ ರುದ್ರೇಶ್, ಶ್ರೀಮತಿ ಪರ್ವಿನ್ ಬಾನು ಚಮನ್ ಸಾಬ್, ಶ್ರೀಮತಿ ಶಾರದಮ್ಮ ಉಮೇಶ್ ನಾಯ್ಕ, ಸುರೇಂದ್ರಪ್ಪ, ಪಿ.ಕೆ. ರಾಜೇಂದ್ರಪ್ಪ, ಎಸ್.ಎನ್. ಜಯಪ್ರಕಾಶ್, ಎನ್.ಕೆ. ಗುರುಪಾದಪ್ಪ, ವಿ.ಜಿ. ರುದ್ರೇಶ್, ಶ್ರೀಮತಿ ವನಜಾಕ್ಷಮ್ಮ ನಾಗರಾಜಪ್ಪ, ದಯಾನಂದ, ರಂಗಪ್ಪ, ಡಿ.ನಾಗರಾಜಪ್ಪ, ಲೋಕೇಶಪ್ಪ, ಹುಚ್ಚೆಂಗಪ್ಪ, ಬಸಪ್ಪ ಗುರುಲಿಂಗಪ್ಪ ಅಗ್ನಿ.

### ಆವರಗೊಳ್ಳ


**ಗುಗ್ಗಳ ಸೇವೆ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವದ ಪ್ರಯುಕ್ತ ಬೆಳಿಗ್ಗೆ 8ಕ್ಕೆ ಗುಗ್ಗಳ ಸೇವೆ. ರಾತ್ರಿ 10 ಗಂಟೆಗೆ ಓಕುಳಿ ಮತ್ತು ಗಂಗಾಪೂಜೆ ಹಾಗೂ ವೀರಗಾಸೆ.

### ಹರಿಹರ

**ಪಾದಯಾತ್ರಿಗಳಿಗೆ ಬೀಳ್ಕೊಡುಗೆ :** ಕೊಟ್ಟೂರು ಶ್ರೀ ಗುರು ಬಸವ ರಾಜೇಂದ್ರ ಸ್ವಾಮಿ ರಥೋತ್ಸವಕ್ಕೆ ತೆರಳುವ ಪಾದಯಾತ್ರಿಗಳಿಗೆ ಬೀಳ್ಕೊಡುಗೆ ಸಮಾರಂಭ. ಸ್ಥಳ: ಹಳೇಪೇಟೆ ಶ್ರೀ ಬಸವೇಶ್ವರ ದೇವಸ್ಥಾನ. ಸಮಯ : ಮಧ್ಯಾಹ್ನ 1.30ಕ್ಕೆ. ಸಾನಿಧ್ಯ : ಶ್ರೀ ಓಂಕಾರೇಶ್ವರ ಸ್ವಾಮೀಜಿ. ಅಧ್ಯಕ್ಷತೆ : ಬಿ.ಪಿ. ಹರೀಶ್. ಮುಖ್ಯ ಅತಿಥಿಗಳು : ಹೆಚ್.ವಿಶ್ವನಾಥಪ್ಪ, ಯಜಮಾನ್ ಟಿ.ಜಯದೇವಪ್ಪ, ಕೊಂಡಜ್ಜಿ ನಾಗಪ್ಪ, ಹೇಮಂತರಾಜ್, ಬಸವರಾಜ್ ಓಂಕಾರಿ.

**ಕಾನೂನು ಉಪನ್ಯಾಸ :** ಹರಿಹರದ ಧರಾಮ ಕಾಲೇಜು ವತಿಯಿಂದ ನಡೆಯುತ್ತಿರುವ ಎನ್.ಎಸ್.ಎಸ್. ಶಿಬಿರದಲ್ಲಿ ಬೆಳಿಗ್ಗೆ 6.30ಕ್ಕೆ ಫಣಿಯಾಪುರ ಹನುಮಂತಪ್ಪ ಅವರಿಂದ ಧ್ವಜಾರೋಹಣ. ಅತಿಥಿಗಳು : ಮಂಜಪ್ಪ, ಎಸ್.ಪಿ. ಮಂಜುನಾಥ್. ಸಂಜೆ 6 ಗಂಟೆಗೆ ಉಚಿತ ಕಾನೂನು ನೆರವು ಶಿಬಿರ. ಮುಖ್ಯ ಅತಿಥಿಗಳು : ಡಿ.ಜಿ.ಜಗಾತಿ, ಬಿ.ನಾಗರಾಜ್, ಗಣೇಶ್ ಕೆ. ದುರ್ಗದ, ಹನುಮಂತರಾಜು, ಫೈಜ್ನಟ್ರಾಜ್, ಕೆ. ಚೌಡಪ್ಪ, ಉಮೇಶ್, ಶ್ರೀಮತಿ ಪುಷ್ಪಾವತಿ ಹಾಲಪ್ಪ, ನಂಜುಂಡಪ್ಪ, ಆರ್. ಸಂತೋಷ್, ಪ್ರೊ. ಜಿ.ಪಿ.ಗುರುರಾಜ್, ಎಂ.ಎಸ್. ತಿಪ್ಪೇಸ್ವಾಮಿ, ಜಿ.ಮುಗ್ದುಂ, ಶೇಖರಗೌಡ ಪಾಟೀಲ್. ಮ್ಯಾಜಿಕ್ ಶೋ : ಬಿ.ಎಸ್. ಉಜ್ಜಿನಪ್ಪ.

**ಎಲೆಬೇತೂರು ಪಾರ್ವತಮ್ಮ ನಿಧನ**



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ ದಿ. ಮೇಗಳಗೇರಿ ಮುರಿಗೆಪ್ಪನವರ ಪತ್ನಿ ಪಾರ್ವತಮ್ಮ (85) ಅವರು ದಿನಾಂಕ 13.2.2012ರ ಸೋಮವಾರ ರಾತ್ರಿ 8.35ಕ್ಕೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.2.2012 ರ ಮಂಗಳವಾರ ಮಧ್ಯಾಹ್ನ 1 ಕ್ಕೆ ಎಲೆಬೇತೂರು ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ.

**JANATHAVANI,** Regd No. 27369/75, Printed by **H.S.Jayasheela,** at Jayadhara Offset Printers, # 326, Dixit Road, Kastur Ba Extension, Davangere -2. Editor: **M.S.Vikas.** Owned & Published by **M.S.Vikas,** from # 326, Dixit Road, Kasturba Extension, Davangere-2.